# 1. ಪಕ್ಷಿಕಾಶಿ

ಇಲ್ಲಿ ಹುಗಲಿಲ್ಲ ನಿನಗೆ, ಓ ಬಿಯದ:
ಇದು ಪಕ್ಷಿಕಾಶಿ!
ದೇವನದಿಯಲ್ಲಿ ದ್ವೀಪಕೃಪೆಯಲ್ಲಿ
ಭಾವತರುವಾಸಿ
ಪ್ರಾಣಪಕ್ಷಿಕುಲಮಿಹುದು ರಕ್ಷೆಯಲಿ
ನಿತ್ಯಮವಿನಾಶಿ:
ಶಕ್ತಿ ಸುತ್ತಲೂ ಕಾವಲಿಹುದು ಕಾಣ್
ಅಗ್ನಿಜಲರಾಶಿ:

ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೆ ಇಟ್ಟು ಬಾ;
ಬಿಂಕದುಕುತಿಯನು ಕೊಂಕು ಯುಕುತಿಯನು
ಎಲ್ಲ ಬಿಟ್ಟು ಬಾ;
ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ,
ಹಮ್ಮನುಳಿದು ಬಾ:
ಇಕ್ಷು ಮಧುರಮೆನೆ ಮೋಕ್ಷ ಪಕ್ಷಿಯುಲಿ
ನಾಡಿನಾಡಿಯಲಿ ಹಾಡಿ ಹರಿದು ನಲಿ
ದಾಡಬಹುದು ಬಾ!

೧೧-೨-೧೯೪೫

# 2. ಆನಂದಮಯ ಈ ಜಗಹೃದಯ

ಆನಂದಮಯ ಈ ಜಗಹೃದಯ:
ಏತಕೆ ಭಯ? ಮಾಣೊ!
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ!

ಬಿಸಿಲಿದು ಬರಿ ಬಿಸಿಲಲ್ಲವೊ,
ಸೂರ್ಯನ ಕೃಪೆ ಕಾಣೊ!
ಸೂರ್ಯನು ಬರಿ ರವಿಯಲ್ಲವೊ;
ಆ ಭ್ರಾಂತಿಯ ಮಾಣೊ!

ರವಿವದನವೆ ಶಿವಸದನವೊ:
ಬರಿ ಕಣ್ಣದು ಮಣ್ಣೊ!
ಶಿವನಿಲ್ಲದೆ ಸೌಂದರ್ಯವೆ?
ಶವಮುಖದಾ ಕಣ್ಣೊ!

ಉದಯದೊಳೇನ್? ಹೃದಯವ ಕಾಣ್!
ಅದೆ ಅಮೃತದ ಹಣ್ಣೊ!
ಶಿವ ಕಾಣದೆ ಕವಿ ಕುರುಡನೊ:
ಶಿವ ಕಾವ್ಯದ ಕಣ್ಣೊ!

೬-೧-೧೯೩೬

## 3. ಉಭಯ ಸಂಕಟ

ಹೇಳಿದರೆ ಹಾಳಾಗುವುದೊ ಈ ಅನುಭವದ ಸವಿಯು;
ಹೇಳದಿರೆ ತಾಳಲಾರನೊ ಕವಿಯು!

ನುಡಿಗಳನು ತೊಡಗಿದರೆ ತೊದಲುವುದು ನಾಲಗೆಯು,
ಕಳ್ಳರಂದದೊಳೋಡುವುವು ಪದಗಳೆಲ್ಲ;
ತನ್ನಧಿಕತೆಗೆ ತಾನೆ ಮೂರ್ಛೆ ಹೋಹುದು ಭಾವ
ಮಾತ ಮೀರಿದ ಮೌನದೊಳು ಮಗ್ನವಾಗಿ!

ಒಲುಮೆಯಪ್ಪುಗೆಯಂತೆ ಎನಲು ಸಾಧಾರಣ;
ಯೋಗಿಯ ಸಮಾಧಿ ಎನೆ ಅತಿ ಅಪೂರ್ವ;
ಕವಿಯ ರಸರತಿ ಎನಲು ಕವಿಗೊರ್ವನಿಗೆ ವೇದ್ಯ;
ಮೃತ್ಯು ಮಾಧುರ್ಯಮೆನೆ ಬದುಕಿಹರಿಗರಿದಯ್ಯ!

೧೬-೭-೧೯೩೬

## 4. ಲತಾನಟಿ

ಫುಲ್ಲ ಕುಸುಮ ಫಣಾ ಜಟಿ
ಪವನ ಲೀಲಾಲೋಲ ಕಟಿ
ಕುಣಿಯುತಿಹಳದೊ ಲತಾನಟಿ
ಪ್ರೇಮ ಮಧೂನ್ಮಾದಿನಿ!

ಮಲೆ ಬನ ಬಾನಾಡುಂಬೊಲಂ;
ಕವಿಯೊರ್ವನೆ ರಸಿಕ ಕುಲಂ;
ನವರಸಂಗಳೆ ಕುತೂಹಲಂ:
ನಂದನವಾಯ್ತೊ ಮೇದಿನಿ!

ನೆನೆ ರತಿಯಂ: ಲಾಸ್ಯದ ಸತಿ;
ನೆನೆ ಶಿವನಂ: ತಾಂಡವ ಯತಿ;

ಮತಿಯಂತೆಯೆ ಮೆರೆವುದೊ ಗತಿ:
ನಿಖಿಲ ರಸಾಹ್ಲಾದಿನಿ!

ಪ್ರತಿಕಂಪಿತ ಖಗಗಾನಂ
ನಗ ನಿರ್ಝರ ಜಲತಾನಂ
ಹಿಮ್ಮೇಳದ ಸನ್ಮಾನಂ:
ಲತೆಯೆ ಭರತಬೋಧಿನಿ!

ತೈ ತಕ ತೈ ತೈ ತಕ ತೈ
ವರ್ತಿಸುತಿರೆ ಹೂವಿನ ಕೈ
ನರ್ತಿಸುತಿದೆ ಹಸುರಿನ ಮೈ:
ಚಲನ ಕಲೋನ್ಮಾದಿನಿ!

ಅತ್ತಲೊಮ್ಮೆ ಇತ್ತಲೊಮ್ಮೆ
ನೆತ್ತಿಗೊಮ್ಮೆ ಪಾದಕೊಮ್ಮೆ
ಮಣಿವ ಕುಣಿವ ತಣಿವ ಹೆಮ್ಮೆ
ನಾಟ್ಯ ರಸಹ್ರಾದಿನಿ

ರಸ ತರಂಗದುಯ್ಯಲೆಯಲಿ
ಲತಾನಟಿಯ ಬಾಹುಗಳಲಿ
ರಿಂಗಣಗುಣಿವುದಂಗಗಳಲಿ
ಕವಿಯ ಮನೋನ್ಮಾದಿನಿ!

೬-೬-೧೯೩೮

# 5. ಶರತ್ಕಾಲದ ಸೂರ್ಯೋದಯದಲಿ

ಶರತ್ಕಾಲದ ಸೂರ್ಯೋದಯದಲಿ
ಸ್ವರ್ಗವು ಹೊಮ್ಮಿರೆ ಮರ್ತ್ಯಹೃದಯದಲಿ,
ಹೊರ ಹೊರಟೆನು ನಾ ಸಂಚರಿಸೆ.-
ಹೊಂಗದಿರ್ಗಳ ಮಳೆ ಸುರಿಸುರಿದಿತ್ತು;
ಬಂಗಾರದ ಹೊಳೆ ಹರಿದಾಡಿತ್ತು,
ತಿರೆ ಸಗ್ಗವದಾಯಿತೊ ಎನಿಸೆ!

ಹಾಸಗೆಯಂದದಿ ಬಯಲನು ತಬ್ಬಿ
ಹಚ್ಚನೆ ಹಸುರದು ಹಸಿಹಸಿ ಹಬ್ಬಿ
ಪಚ್ಚೆಯ ವೇದಿಕೆಯಾಗಿತ್ತು.
ಹುಲ್ಲಿನ ಮೇಗಡೆ ಇಬ್ಬನಿ ರಾಸಿ
ಶಿಶುವಿನ ರುಚಿಯಲಿ ನಗೆನಗೆ ಸೂಸಿ
'ಉರಿ-ಕಿಡಿ' 'ಕಿಡಿ-ಉರಿ' ಆಗಿತ್ತು:

ಹಚ್ಚನೆ ಪಚ್ಚನೆ ವೇದಿಕೆಯಲ್ಲಿ
ಸಾಸಿರಗಟ್ಟಲೆ ಮುತ್ತನು ಚೆಲ್ಲಿ,
ರನ್ನದ ಕಿರುಹಣತೆಗಳಲ್ಲಿ
ಶ್ಯಾಮಲ ತೈಲದಿ ಹೊನ್ನಿನ ಬತ್ತಿ:
ಕಾಮನಬಿಲ್ಲಿನ ಬೆಂಕಿಯ ಹೊತ್ತಿ
ಸೊಡರುರಿಯುತ್ತಿವೆ ಅಲ್ಲಲ್ಲಿ!

ಭಾವಾವೇಶದಿ ನೋಡುತ ನಿಂತೆ,
ಹೃದಯದೊಳುರಿಯಿತು ರಸಮಯಚಿಂತೆ:
'ಉರಿ-ಕಿಡಿ'ದೆನು ಹಿಮಮಣಿಯಂತೆ!
ಕಲ್ಲಿನ ಯುಗಯುಗದಿರವೂ ಶೂನ್ಯ,
ಹುಲ್ಲಿನ ಅರೆನಿಮಿಷದ ಹನಿ ಧನ್ಯ:
ತಳತಳಿಪುದೆ ಸಾರ್ಥಕ ಪುಣ್ಯ:

ಎಂದಾಲೋಚಿಸುತಿರೆ, ಬಗೆ ಮರಳಿ
ಉರಿಯಿತು ಜ್ವಾಲಾರೂಪದಿ ಕೆರಳಿ:
ನೋಡಿದರೆಲ್ಲಿಯು ಚೈತನ್ಯ!

ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ,
ನೀರಿನ ಹನಿಯಲಿ, ಬೆಂಕಿಯ ಕಿಡಿಯಲಿ,
ನನ್ನಲಿ,-ಎಲ್ಲಿಯು ಚೈತನ್ಯ!

ಹನಿಯನು ನಾನನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ!
ನನ್ನಡಿ ಸೋಂಕಿಹ ಈ ಹುಲ್ಲು
ಇನಿಯನ ತುಟಿಸೋಂಕನೆ ಸವಿಯುತ್ತಿದೆ!
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ
ಚೇತನ ಮೂರ್ತಿಯು ಆ ಕಲ್ಲುಃ-
ತೆಗೆ! ಜಡವೆಂಬುದೆ ಬರಿ ಸುಳ್ಳು!

೨-೧೧-೧೯೩೩

## 6. ಲಲಿತಾದ್ರಿ

ತಿರೆಯ ಹೋರಾಟದಲಿ
ಬಗೆ ಕದಡಿ ಕಂಗೆಡಲು,
ನೇಹಿಗನೆ, ಬಾ, ಇಲ್ಲಿ
ಶಾಂತಿಯಿಹುದು!
ತಂಬೆಲರ ತೀಟವಿದೆ
ಬಳಲಿಕೆಯ ಪರಿಹರಿಸೆ;
ಮೋಹಿಸಲು ಕಂಗಳನು
ಪರಮ ಸೌಂದರ್ಯವಿದೆ;
ಜೀವವನು ಸಂತವಿಸೆ
ದೇವ ಸಾನ್ನಿಧ್ಯವಿದೆ!
ಸೋದರನೆ, ಬಾ, ಇಲ್ಲಿ;
ಧನ್ಯನಾಗುವೆ ಇಲ್ಲಿ;
ಪುಣ್ಯನಾಗುವೆ ಇಲ್ಲಿ;
ಪೂರ್ಣನಾಗುವೆ ಇಲ್ಲಿ;
ಬೆಟ್ಟದಲ್ಲಿ.

ಬೆಂಗದಿರ ಮುಳುಗುತಿರೆ,
ಬೈಗುಗೆಂಪಳಿಯುತಿರೆ,
ಮುಚ್ಚಂಜೆ ಮುಸುಗುತಿರೆ,
ಕತ್ತಲೆಯು ಕವಿದು ಬರೆ,
ಪಯಣಿಗನೆ, ಬಾ, ಇಲ್ಲಿ
ನಿಂತು ನೋಡು!
ಮೂಡಲನು ಪಡುವಲನು
ತೆಂಕಲನು ಒಡಗಲನು
ಗಗನವನು ಭೂಮಿಯನು
ಮನದಣಿಯೆ, ಕಣ್‌ತಣಿಯೆ,
ಎದೆಯರಳಿ ಮೈಮರೆಯೆ,
ತೂಣಗೊಂಡವನಂತೆ
ನಿಂತು ನೋಡು!

ಕಂಬನಿಗಳಿಳಿಯುತಿರೆ,
ಮೈನವಿರು ನಿಮಿರುತಿರೆ,
ಎದೆಯಲರು ಅರಳುತಿರೆ,
ಮೇಣಂತರಂಗದಲಿ
ಹೊಸ ಬೆಳಕು ಮೂಡಿ ಬರೆ,
ಬಣ್ಣನೆಗೆ ಬಾರದಿಹ
ಚೆಲುವನವಲೋಕಿಸಲು
ಮಾತು ಮೈದೆಗೆಯುತಿರೆ,
ಬಾಳೆಲ್ಲ ಹಿಗ್ಗಿ ಬರೆ,
ದೇಹ ಪಂಜರದಲ್ಲಿ
ಜೀವ ಹೋರಾಡುತಿರೆ,
ಬಾ, ಇಲ್ಲಿ, ನೇಹಿಗನೆ,
ಮೌನದಲಿ ಮಮತೆಯಲಿ
ನಿಂತು ನೋಡು!

ಹುಣ್ಣಿಮೆಯ ದಿನದಲ್ಲಿ,
ಪೂರ್ವ ದಿಗ್ದೇಶದಲಿ,
ದೂರ, ಬಹು ದೂರದಲಿ,
ಮಬ್ಬಿನ ದಿಗಂತದಲಿ,

ದುಂಡಾಗಿ, ಕೆಂಪಾಗಿ,
ಸುಂದರ ಸುಧಾಕರನು
ಮೂಡಿ ಮೇಲೇಳುತಿರೆ,
ಸುತ್ತಲಿಹ ಬಯಲುಗಳ
ಹಸುರಾದ ಹೊಲಗಳನು,
ಅಲ್ಲಲ್ಲಿ ಮೆರೆಯುತಿಹ
ಬಿತ್ತರದ ಜಲಗಳನು
ಕೌಮುದಿಯು ಮುತ್ತುತಿರೆ,
ಚಂದ್ರಿಕೆಯು ಬೆಳಗುತಿರೆ,
ಬೆಳ್ದಿಂಗಳೆಸೆಯುತಿರೆ,
ಮೌನ ಮಿತಿಮೀರುತಿರೆ,
ಧ್ಯಾನ ಬಗೆವುಗುತಲಿರೆ,
ನಿಂತಿಲ್ಲಿ, ನೇಹಿಗನೆ,
ಚೆಲುವ ನೋಡು!

ತಾರೆಗಳ ದಿಬ್ಬಣವು
ಗಗನದಿಂದೈತಂದು
ಬೆಟ್ಟದುದಿಯಲಿ ತಳುವಿ,
ಸೋಪಾನಗಳನಿಳಿದು
ತಪ್ಪಲಲಿ ಮೇಳವಿಸಿ
ಕವಿದು ಕಿಕ್ಕಿರಿದಂತೆ,
ಬುವಿ ಬೆಸಲೆಯಾದಂತೆ,
ಚುಕ್ಕಿಗಳ ತಿಂತಿಣಿಯ
ತೆಕ್ಕನೆಯೆ ಪೆತ್ತಂತೆ,
ಸಗ್ಗ ನೆಲಕಿಳಿದಂತೆ,
ಬಾನಿಳೆಗೆ ಬಿದ್ದಂತೆ,
ನೂರಾರು ದೀಪಗಳು,
ಮಿಣುಕುತಿಹ ಸೊಡರುಗಳು,
ಸಾಲಾಗಿ, ಡೊಂಕಾಗಿ,
ಗುಡಿಗಟ್ಟಿ ಕೊಂಕಾಗಿ,
ಗೊಂಚಲಲಿ ಗುಂಪಾಗಿ,
ತೆಕ್ಕನೆಯೆ ಹುಟ್ಟಿಬರೆ,
ಪತ್ತನದಿ ಮಿಂಚಿ ಬರೆ,

ಬೆರಗಾಗಿ, ಮರುಳಾಗಿ,
ಬಾ ನೋಡು, ನಿಂತಿಲ್ಲಿ
ಮೂಕನಾಗಿ!

ತಾರೆಗಳ ತವರೂರು
ಸಿಂಗರದ ಮೈಸೂರು!
ಕನ್ನಡದ ಕುಶಲತೆಗೆ
ಕನ್ನಡದ ರಸಿಕತೆಗೆ
ಕನ್ನಡದ ನಿಪುಣತೆಗೆ
ಕನ್ನಡಿಯು ಮೈಸೂರು!
ಕನ್ನಡಿಗರೆದೆಯರಿಯೆ
ಕನ್ನಡಿಗರೊಲವರಿಯೆ
ಕನ್ನಡಿಗರಿಂಪರಿಯೆ,
ಸೋದರನೆ, ನೇಹಿಗನೆ,
ಲಲಿತ ಲಲಿತಾದ್ರಿಯಲಿ
ನಿಂತು ನೋಡು!

ಕಬ್ಬಗಳ ಕಟ್ಟುವೊಡೆ
ಕಬ್ಬಿಗನೆ, ಬಾ, ಇಲ್ಲಿ;
ಗಾನವರು ಹಾಡುವೊಡೆ
ಗಾಯಕನೆ, ಬಾ, ಇಲ್ಲಿ;
ಬೀಣೆಯನು ಮಿಡಿಯುವೊಡೆ
ಬಾ ಇಲ್ಲಿ, ವೈಣಿಕನೆ;
ಧ್ಯಾನವನು ಮಾಡುವೊಡೆ
ಬಾ ಇಲ್ಲಿ, ತಾಪಸನೆ;
ಬಣ್ಣದಲಿ ಭಾವಗಳ
ಬಣ್ಣಿಪೊಡೆ ಬಾ ಇಲ್ಲಿ,
ವರ್ಣಶಿಲ್ಪಿ!

ದೇಗುಲವು ಭಕ್ತರಿಗೆ,
ಉಪವನವು ರಸಿಕರಿಗೆ,
ಲೌಕಿಕರಿಗಿದು ಸಗ್ಗ,

ವೈದಿಕರಿಗಿದು ಮುಕ್ತಿ,
ಲಲಿತ ಗಿರಿಯು!

೬-೮-೧೯೨೯

## 7. ಭಾದ್ರಪದದ ಸುಪ್ರಭಾತ

ದಿಗುತಟದಲಿ ತೆರೆಯುತಿತ್ತು
ಹಗಲಿನಕ್ಷಿ;
ಮುಗಿಲ ಗರಿಯ ಕಾಯಿಸಿತ್ತು
ಗಗನಪಕ್ಷಿ.
ಪಚ್ಚೆಯಾಗಿ ಮೆರೆಯುತಿತ್ತು
ಬುವಿಯ ಮಣ್ಣು;
ಪಸುರ ಸಿರಿಯ ಮೇಯುತಿತ್ತು
ಕವಿಯ ಕಣ್ಣು.

ಜೇನುತುಪ್ಪದಲ್ಲಿ ತೊಯ್ದ
ಹಣ್ಣಿನಂತೆ
ಪೊಸ ಚೆಲ್ವಿನ ಬಲೆಯ ನೆಯ್ದ
ಹೆಣ್ಣಿನಂತೆ
ಸವಿಗೆ ಸವಿಯ ಪೇರಿಸಿತ್ತು
ಭದ್ರಮಾಸಂ;
ಕವಿಗೆ ಕವಿಯ ತೋರಿಸಿತ್ತು
ಸುಪ್ರಭಾತಂ!

೧೨-೯-೧೯೩೮

# ೮. ಇಂತಹ ಸುಂದರ ಪ್ರಾತಃಕಾಲದಿ

ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕಿಂತಲು ಬೇರೆಯ ಗುರಿ
ಜೀವಕೆ ಬೇಕಿಲ್ಲ:
ಚಿರಸೌಂದರ್ಯದ ಸಂಪದವಿದ್ದರೆ
ಧರ್ಮಕೆ ಚ್ಯುತಿಯಿಲ್ಲ.
ಮತಿಯಲ್ಲ;-
ರಸಾನುಭೂತಿಯ ರಸಪಥವಲ್ಲದೆ
ಸತ್ಯಕೆ ಗತಿಯಿಲ್ಲ!

ನಿನ್ನೆಯ ಸಂಜೆಯ ಮಳೆಯಲಿ ಮಿಂದು
ಕಳಕಳಿಸುವ ಹಸುರ್ಬಯಲಲಿ ಇಂದು
ಹೊಂಬಿಸಿಲಲಿ ಉರಿದಿರೆ ಜಲಬಿಂದು
ಸತ್ತಳೊ ಉರ್ವಶಿ ಸ್ವರ್ಗದಲಿ!
ಗಾಳಿಯ ಮಂಡಲ ಸ್ಫಟಿಕದವೋಲಿದೆ;
ನಭವೋ ನೀಲವಿತಾನವ ಹೋಲಿದೆ;
ಅಲ್ಲಲ್ಲಿಯೆ ಮುಗಿಲಿನ ಪಟ ತೇಲಿದೆ:
ವೈಕುಂಠವಿದೆ ನಿಸರ್ಗದಲಿ!

ದನಕರುಗಳು ಬಯಲಲಿ ಮೇಯುತ 'ಇವೆ';
ಗಿರಿತರುಗಳು ಬದುಕನು ಸವಿಯುತ 'ಇವೆ';
ಅರಿವಾಸೆಯ ಮಾಯೆಗೆ ಬೀಳದೆ 'ಇವೆ';
ಇರುವಿಕೆಯಾನಂದದಿ ನಲಿಯುತ 'ಇವೆ'.
'ಇವೆ';-
ಇರುವಿಕೆಗಿಂತಲು ಹೆಚ್ಚಿನ ಗೋಜಿಗೆ ಹೋಗದಿವೆ!

'ಅರಿವಾ' ಸೆಯೆ ಮಾಯ ಬಂಧ;
'ಇರು' ವುದೆ ಮುಕ್ತಿಯ ಆನಂದ!
'ಅರಿವಾ' ಸೆಯ ಬಿಡು; 'ಇರು' ವಾಸೆಯ ತೊಡು!
ಇಂತಹ ಸಮಯದಿ 'ಇರುವಿಕೆ' ಗಿಂತಲು
ಹೆಚ್ಚಿನ 'ಅರಿವಿ' ಲ್ಲ!
ಇಂತಹ ದಿವ್ಯಪ್ರಭಾತ ಕಾಲದಿ

ಜೀವಿಸುವುದಕಿಂತಲು ರಸಜೀವಿಗೆ
ಬೇರೆಯ ಗುರಿಯಿಲ್ಲ!

೮-೯-೧೯೩೪

## ೯. ಒಂದು ಪ್ರಾತಃಕಾಲ

ಓಡು ಹೊರಗೆ, ಓಡು ನೋಡು:
ಮೂಡುತಿಹನು ದಿನಮಣಿ!
ಹಚ್ಚನೆ ಹಸುರು ಬಯಲಮೇಲೆ
ಮಿರುಗುತಿಹವು ಹಿಮಮಣಿ!

ಸಗ್ಗದ ಸಿರಿಯೆ ನೆಲಕೆ ಬಿದ್ದು
ಹುಡಿ ಹುಡಿ ಹುಡಿಯಾಗಿದೆ!
ಬುವಿಯ ಬಾಳು ಸಂತೋಷಕೆ
ಕಿಡಿ ಕಿಡಿ ಕಿಡಿವೋಗಿದೆ!

೧೬-೮-೧೯೩೫

## 10. ಬಾ ಫಾಲ್ಗುಣ ರವಿ ದರ್ಶನಕೆ!

ಶಿವಮಂದಿರಸಮ ವನಸುಂದರ ಸುಮಶೃಂಗಾರದ ಗಿರಿಶೃಂಗಕೆ ಬಾ;
ಬಾ ಫಾಲ್ಗುಣ ರವಿ ದರ್ಶನಕೆ!

ಕುಂಕುಮ ಧೂಳಿಯ ದಿಕ್ತಟವೇದಿಯೊಳೋಕುಳಿಯಲಿ ಮಿಂದೇಳುವನು;
ಕೋಟಿವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು;
ಚಿನ್ನದ ಚೆಂಡನೆ ಮೂಡುವನು; ಹೊನ್ನನೆ ಹೊಯ್‌ನೀರ್ ನೀಡುವನು.
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆಹರಿಯಿಸಿ ರವಿ ದಯಮಾಡುವನು!

ತೆರೆತೆರೆಯಾಗಿಹ ನೊರೆನೊರೆ ಕಡಲೆನೆ ನೋಡುವ ಕಣ್ಣೋಡುವವರೆಗೆ
ಬನಸಿರಿ ತುಂಬಿದ ಕಣಿವೆಯ ಹಂಬಿರೆ ಧೂಳೀಸಮಹಿಮ ಬಾನ್‌ಕರೆಗೆ
ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿಮನ ತಾನುರಿದುರಿದೇಳೆ
ಮರಗಿಡದಲಿ ಜಡದೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ!

ವರ್ಣನದಿಂದ್ರಿಯ ನಂದನವನು ದಾಂಟುತೆ ದರ್ಶನ ಮುಕ್ತಿಯ ಸೇರಿ
ವ್ಯಕ್ತಿತೆ ಮೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ:
ಸರ್ವೇಂದ್ರಿಯ ಸುಖನಿಧಿ ಅಲ್ಲಿ; ಸರ್ವಾತ್ಮನ ಸನ್ನಿಧಿ ಅಲ್ಲಿ;
ಸಕಲಾರಾಧನ ಸಾಧನಬೋಧನದನುಭವರಸ ತಾನಹುದಲ್ಲಿ!*

೪-೩-೧೯೩೭

* ‘ನವಿಲುಕಲ್ಲು’ ಎಂಬ ಶಿಖರಸ್ಥಾನದಲ್ಲಿ ಉಷಃಕಾಲದಲ್ಲಿ ನಿಂತಂದು ದೊರೆಕೊಂಡ ದರ್ಶನ, “ಮಲೆನಾಡಿನ ಚಿತ್ರಗಳು” ನೋಡಿ.

# 11. ಕೆಂದಳಿರು

ಆಃ! ನಿಂತು ನೋಡಿಲ್ಲಿ:
ಸ್ವರ್ಗವರಳುತಿದೆ ಆ ಮರದ ಮೈಸಿರಿಯಲ್ಲಿ!
ಉರ್ವಶಿ ತಿಲೋತ್ತಮೆಯರೆಲ್ಲ ನರ್ತಿಪರಲ್ಲಿ
ಆ ಮರದ ಕೆಂದಳಿರಿನಿಂದ್ರನಾಸ್ಥಾನದಲಿ!
ನಿಂತ ಹಜ್ಜೆಯ ಕೀಳಲಾರದೆಯೆ ನಡೆಗೆಟ್ಟು
ನೋಡುತಿಹೆ ನಾನೊಂದು ಮರವಾಗಿ ಮರವಟ್ಟು!
ಅಯ್ಯೊ ಬೇಡುವೆ ನಾನು! ಆಃ! ನಿಂತು ನೋಡಿಲ್ಲಿ:
ಚೇತನದ ಚಿಲುಮೆ ಚಿಮ್ಮುತಿದೆ ಆ ಮರದಲ್ಲಿ!

ನಾ ಕಂಡ ಚೆಲುವೆಯರ ಚೆಂದುಟಿಗಳೆಲ್ಲ
ಸಂಮೇಲಗೈದಂತೆ ತೋರುತಿಹುದಿಲ್ಲಿ!
ಭೂಮಿ ತಾಯಿಯು ತನ್ನ ಹಸುಳೆಗಳನೆಲ್ಲ
ಶಿಶುಪ್ರದರ್ಶನಕೆಂದು ಕಳುಹಿಸಿಹಳಿಲ್ಲಿ!
ಮೃಣ್ಮಯದ ಹೃದಯದಲಿ ಚಿನ್ಮಯನಿಹನು ಎಂದು
ಜಡವನೆಂದೆಂದಿಗೂ ಚೇತನ ಗೆಲುವುದೆಂದು,
ಮಾಗಿ ಮುಗಿದೊಡನೆಯೇ ಸುಗ್ಗಿ ಬರುವುದು ಎಂದು
ನೆಚ್ಚುಗೆಡದೆಯೆ ಮುಂದು ಮುಂದಕೆ ನಡೆ ಎಂದು,-
ನಳನಳಿಸುತಿರೆ ಕೆಂದಳಿರಿನೈಸಿರಿಯ ಸಿರಿ
ಸಾರುತಿಹಳೀ ದಿವ್ಯ ತರುಕಲಾಸುಂದರಿ!

ಆಃ! ನಿಂತು ನೋಡಿಲ್ಲಿ:
ನೂರು ಋಷಿಗಳ ಬೋಧನೆಯ ಸಾರವಿಹುದಿಲ್ಲಿ;
ನೂರು ವೈರಾಗಿಗಳ ಸಂಸಾರವಿಹುದಿಲ್ಲಿ!
ಬುದ್ಧಿಯರಿಯದ ಸಿದ್ಧಿ ಭಾವಗೋಚರವಿಲ್ಲಿ!
ವ್ಯಕ್ತಿತ್ವವೇ ಜ್ವಾಲೆಯಾಗುರಿಯುವುದು ಇಲ್ಲಿ!
ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿಗೈತರು, ಯಾತ್ರಿಕನೆ, ಇದುವೆ ತರುಕಾಶಿ!
ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ?
ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ!

೯-೨-೧೯೩೩

## 12. ಗುಲಾಬಿ

ಯಾರೂ ನೋಡದ ಯಾರಿಗು ಬೇಡದ
ಹೂದೋಟದ ಈ ಮೂಲೆಯಲಿ
ನೋಡಿದೊ ಒಂದೆ ಗುಲಾಬಿಯ ಹೂವಿದೆ
ಸ್ವರ್ಗಸುಂದರಿಯ ಲೀಲೆಯಲಿ!
ಹೂವಿನ ಚೆಲುವಿಂದೀ ಮರುಭೂಮಿ
ನಂದನವಾದಂತಿರೆ, ಕವಿ ಕಾಮಿ!

ಮನ್ಮಥ ಚುಂಬನ ದಂತಕ್ಷತದಿಂ
ಬೆಚ್ಚನೆ ಕೆನ್ನೆತ್ತರು ಸೋರಿ
ರತಿಚೆಂದುಟಿಯಿಂದಿಳೆಗುರುಳುತೆ ತಾ
ಮತ್ತೆ ಗುಲಾಬಿಯವೊಲು ತೋರಿ,
ನೋಳ್ಪ ಕಂಗಳಿಗೆ ಕೊಡುತಿದೆ ಮುತ್ತುಃ
ಬಾ, ನೀನೂ ಮುದ್ದಿಸಿ ತುಟಿಯೊತ್ತು!

೧೩-೬-೧೯೩೫

## 13. ಚೋರೆ-ಬೋರೆ

ಬೊಬ್ಬುಳಿ ಗಿಡದಲಿ ಗುಬ್ಬಳಿಸುತ್ತಿದೆ
ಒಬ್ಬೊಂಟಿಗ ಚೋರೆ;
ಕಿವಿಗೊಟ್ಟಲುಗಾಡದ ಕೇಳುತ್ತಿದೆ
ಹಗಲ್‌ನಿದ್ದೆಯೊಳದ್ದಿದ ಬೋರೆ!
ವ್ಯೋಮದ ರವಿ, ಭೂಮಿಯ ಕವಿ,
ಪ್ರೇಕ್ಷಕರಿನ್ನೊಬ್ಬರ ಕಾಣೆ.
ಜಡ ಚೇತನದಾಲಿಂಗನಃ
ಜುಮ್ಮೆಂದಿದೆ ಮೈ, ಶಿವನಾಣೆ!
ಸತ್ತಿಹ ಮೃತ್ತಾಗಿಹ ಬಿತ್ತರ ಬೋರೆಯ ಪುಲ್‌ನವಿರಿನ ಮೈ
ಚೋರೆಯ ಮಿಂಚುಲಿ ಹೊನಲಿಗೆ ರೋಮಾಂಚಿತವಾಗುತ್ತಿಹುದೈ!

ನಾನಿಲ್ಲಿಲ್ಲದೆ ಹೋಗಿದ್ದರೆ? ಹಾ ನಾನರಿಯೆ!
ನಾನಿಲ್ಲಿರುವಂದೆನಗಾದನುಭವವಿದನೆಂದೂ ಮರೆಯೆ!

೧೭-೯-೧೯೩೮

## 14. ಪ್ರಕೃತಿ ಉಪಾಸನೆ*

ಬೆಟ್ಟದುದಿಯಲಿ ಗುಡಿಯ ಗೋಪುರಂ ನಿಂತಂತೆ
ನಿಂತೆ ನಾಂ ನೀರ್ಮನೆಯ ದಿಬ್ಬದಲಿ, ದೃಷ್ಟಿಯಿಂ
ಸೃಷ್ಟಿಯಂ ತಬ್ಬಿ, ಮೇಣಾತ್ಮಭಾವದಿ ಹಬ್ಬಿ
ಭೂವ್ಯೋಮಮೆಲ್ಲಮಂ. ತಂಗಾಳಿ ಚಳಿಯಾಗಿ
ಬೀಸಿದುದು. ತೇಲಿದುವು ವಾಯುಮಂಡಲದಲ್ಲಿ
ವಿವಿಧ ಪಕ್ಷಿಗಳುಲಿಗಳಿಂಪಾಗಿ. ನಾದವೂ
ದೃಶ್ಯವೂ ಚಿತ್ತದಲಿ ಚಿತ್ರಗತವಾದಂತೆ
ಹಿನ್ನೆಲೆಯ ರಚಿಸಿರಲು, ಸಿತ ಚೈತ್ರಪಂಚಮಿಯ
ಸೂರ್ಯನಾವಿರ್ಭಾವಮಂ, ಪ್ರಿಯನ ಪ್ರೇಯಸಿಯು
ನಿಡುಬಯಸುವಂದದಲಿ, ದರ್ಶನೋತ್ಕಂಠಿತಂ
ತಾನಾಗಿ ಹಾರೈಸಿರಲು ತುದಿಬೆರಳ ಮೇಲೆ,
ಕಣ್ಣನರೆ ತೆರೆದಂತೆ ನೀಲಿಹೊಗೆ ಮುಸುಗಿರ್ದ
ದೇವೇಂದ್ರ ದಿಕ್ಕಿನ ದಿಗಂತದಿಂ ಮೂಡಿದನು
ಕಿರಣವಿಲ್ಲದ ರಕ್ತಬಿಂಬದ ದಿವಾಕರಂ-
ಕುಂಕುಮದ ಪುಷ್ಯೋದಕದಿ ಮಿಂದುಬಂದಂತೆ,
ಯಜ್ಞಕುಂಡದಿನೆದ್ದ ಕೆಂಡ ದೇವತೆಯಂತೆ,
ಮೂಷೆಯಲಿ ಕಾಯ್ದ ಕಬ್ಬಿಣದುಂಡೆ ಚೆಂಡಂತೆ,
ಕತ್ತಲಲಿ ಕತ್ತರಿಸಿದುರಿಯ ವರ್ತುಲದಂತೆ,
ಕವಿಯ ಭಾವಾವೇಶದೊಂದು ಹೆಗ್ಗಿಡಿಯಂತೆ,
ಮೇಣೆನ್ನ ಸವಿಮಾತು ಹೋಲಿಕೆಗಳುರೆ ನಾಚಿ,
ಮೌನದ ಮಹಿಮೆ ಹೆಚ್ಚೆ, ಚೆಂತೆ ಮೈಮರೆವಂತೆ!
ಕಣ್ ತುಳುಕಿತೆದೆ ನಲಿದುದಸು ಹಿಗ್ಗಿತುಲ್ಲಸದಿ;
ಮಿಂಚು ಹರಿವಂತೆ ನೆತ್ತರು ಚಿಮ್ಮಿ ದೇಹದಲಿ
ತೇಜಸ್ವಿಯಾದೆ ನಾಂ ಸೂರ್ಯನಂತೆ!

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯು
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ?
ನೋಡದೋ: ನನ್ನ ಪದತಲದಿ
ಎಂಬಂತೆ ನಗರ ನಾಗರಿಕತೆಯ ಜೀವನಂ
ಹಬ್ಬಿ ಬಿದ್ದಿದೆ, ತನ್ನ ನೂರಾರು ಬಾಯ್ಗಳಿಂ
ಕೈಗಳಿಂ ಮೈಗಳಿಂ ಕಣ್ಗಳಿಂ ಕಾಲ್ಗಳಿಂ,
ನಖದಂಷ್ಟ್ರ ಭೀಷಣ ಪೆಡಂಭೂತವನು ಹೋಲಿ!
ಪ್ರಾಸಾದ, ಸೌಧ, ಮಂದಿರ, ಗುಡಿ, ಗೋಪುರಂ,
ಮನೆ, ಚರ್ಚು, ಗುಡಿಸಲು, ಮಸೀದಿ, ಯಂತ್ರಾಲಯಂ,
ಕಾರ್ಖಾನೆ, ಆಸ್ಪತ್ರೆ, ಶಾಲೆ, ವಿದ್ಯಾಶಾಲೆ,
ಹೋಟಲಾಹಾರವಿಕ್ರಯದ ಮನೆ, ಮದ್ಯಮಂ
ಮಾರುವಂಗಡಿ, ಕೋರ್ಟು, ಜೈಲು ಮೇಣರಮನೆ
-ಇಂತು ಹಬ್ಬಿದೆ ಪಟ್ಟಣದ ಬೃಹಜ್ಜೀವನಂ
ಶತಶತ ಸಹಸ್ರಶತ ಶಾಖೋಪಶಾಖೆಯಿಂ
ಮರವೊಂದರಿಂದಾದ ಹೇರಡವಿಯೆಂಬಂತೆ!
ಯಾವ ಹೃದಯದ ಮನುಜರಿಹರಲ್ಲಿ? ನನ್ನವೋಲ್
ಯಾರಾದರೀ ಉದಯವನು ನೋಡುತಿಹರೇನು?
ಲಕ್ಷದೊಳಗೊಬ್ಬನಿರಬಹುದಾತನಿಗೆ ನಮೋ!
ಏಕೆಂದರಾತನದೆ ಈ ಹೊಳಲಿನೊಳಗಿಂದು
ಈ ಸಮಯದಲಿ ನಡೆಯುವೆಲ್ಲ ಕಾರ್ಯಂಗಳಿಗೆ
ಮಿಗಿಲಹ ಮಹತ್ಕಾರ್ಯ!
ಶಿವ ಶಿವಾ, ಕಣ್ದೆರೆದು
ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ
ನೋಡದಿಹ ಬಾಳೊಂದು ಬಾಳಲ್ಲ! "ಸೊಬಗಿನಲಿ

ಶಿವನಿಹನು; ಶಿವನೆ ಸೊಬಗಾಗಿಹನು.” ಎನಿತೊರೆಯೆ
ಈ ವಚನ ಪುನರುಕ್ತಿಯಾದೀತು? ಹಳಸೀತು?
ಸತ್ಯಂ ಶಿವಂ ಸುಂದರಂ ಎಂದು ಹಾಡಿದರು
ರಸಋಷಿಗಳೆಲ್ಲ. ಮರೆತದನು ನಾವುಗಳಿಂದು
ನೊಂದಿಹೆವು ಜಡಬಾಳ್ಗೆ ಬೇಸತ್ತು. ಸತ್ಯದಲಿ
ಶಿವವಿಹುದು; ಶಿವದಲ್ಲಿ ಸತ್ಯವಿದೆ; ಮೇಣೆರಡು
ಸೌಂದರ್ಯದಲಿ ಲೀನವಾಗಿಹವು. ತಿಳಿದವಗೆ
ಒಂದನುಳಿದೊಂದಿಲ್ಲ. ಲೋಕದಲಿ ದುಃಖವಿರೆ
ಆ ದುಃಖದೊಳಗರ್ಧ ಹೃದಯದಾರಿದ್ರ್ಯದಿಂ
ಬಂದಿಹುದು! ಆ ಹೀನ ದೀನ ದಾರಿದ್ರ್ಯಮಂ
ಪರಿಹರಿಸಿ ‘ದರ್ಶನ’ವ ದಯೆಗೈಯೆ ಕಲೆಯಿಹುದು.
ಕಲೆಯಿಂದ ಜಡವು ಚೇತನವಾಗಿ, ಜೀವನದ
ನೀರಸತೆ ಕಿಡಿಯಾಗಿ, ಪ್ರವಹಿಪುದು ನೂತನತೆ
ಚಿರವಾಗಿ. ಭುವನ ಕವಿವರ ಕವನವೀ ಸೃಷ್ಟಿ;
ಭುವನಶಿಲ್ಪಿಯ ಚಿತ್ರಕೃತಿ; ಭುವನಗಾಯಕನ
ಸುಮಧುರ ಮಹಾಗಾನ! ಸವಿಯದಿರೆ, ನೋಡದಿರೆ,
ಕೇಳದಿರೆ, ಬದುಕಿದ್ದರೂ ನಾವು ಸತ್ತಂತೆ!
“ಎಲ್ಲರೂ ನಿನ್ನಂತೆ ಕಲೆಯ ಆರಾಧನೆಯ
ಗೈಯಲೆಂತುಟು ಸಾಧ್ಯ? ನೋಡಲ್ಲಿ: ಆ ಕೂಲಿ
ಕಾರ್ಖಾನೆಯಲಿ ಯಂತ್ರದೆಡೆ ನಿಂತು ತಲೆಯೆತ್ತೆ
ತೆರಪಿಲ್ಲದಂತೆ ಗೆಯ್ಯುತ್ತಿಹನು. ಈಗವನು
ನಿನ್ನಂತೆ ಸೂರ್ಯನುದಯವ ನೋಡಿ ನಲಿಯೆ ಬರೆ
ಮಧ್ಯಾಹ್ನಕಾತನಿಗೆ ಬರಿಹೊಟ್ಟೆ! ಅವನ ಸತಿ,
ಅವನ ಶಿಶು ಸಾಯುವರು” ಎಂದು ವಾದಿಸುವೆನ್ನ
ಸೋದರನೆ, ಹೋಗಿ ಕೇಳಾ ಕೆಲಸಗಾರನನೆ:
ಅಶಿವ ಕೃತಿಗಳಿಗೆ, ಕಳ್ಳಂಗಡಿಗೆ, ಸಿನಿಮಕ್ಕೆ,
ನೂರಾರು ಹವ್ಯಾಸಗಳಿಗೆನಿತು ವೇಳೆಯನು
ವ್ಯರ್ಥಮಾಡುವನೆಂದು! ಬರಿ ವಾದದಿಂದೇನು?
ಮನಸಿರಲು ಮಾರ್ಗವಿದೆ!
ಅವನ ಮಾತಂತಿರಲಿ.
ಎನಿತು ಶ್ರೀಮಂತಹರೀ ರಾಜಧಾನಿಯಲಿ!
ಅವರೆನಿತು ಕಾಲವನು ಕಳೆಯುವರು ಕಲೆಗಾಗಿ,

ಹೇಳಯ್ಯ? ಅವರೊಳಗೆ ಎನಿಬರೀ ಹೊತ್ತು ನಾ
ಕಾಣುತ್ತಿರುವೀ ಸೂರ್ಯನುದಯವನು ಕೊಂಡಾಡಿ
ಧನ್ಯರಾಗುತ್ತಿಹರು ಹೇಳಯ್ಯ? ಅಥವಾ
ರಾತ್ರಿಯೆಲ್ಲವ ಕಳೆಯುತಿಂದ್ರಿಯೋನ್ಮಾದದಲಿ
ಹೊರಳಿಹರೊ ಸೆಜ್ಜೆಯಲಿ ನಾಗರಿಕ ಪಶುಗಳಂತೆ?
ಪೃಥ್ವಿಯಲಿ ಕ್ಲೇಶಕಷ್ಟಗಳೆಲ್ಲ ಕೊನೆಮುಟ್ಟಿ
ಸರ್ವರೂ ರಸದ್ರಷ್ಟರಾಗಿ, 'ದರ್ಶನ' ಪಡೆದು,
ಕಾವ್ಯದಾಸ್ವಾದನೆಗೆ, ಸೌಂದರ್ಯಸಾಧನೆಗೆ,
ಕಲೆಯ ಆರಾಧನೆಗೆ ಮನವೀಯುವಾ ಪುಣ್ಯ
ಸ್ವರ್ಗವೆಂದೈತರುವುದೋ ಕಾಣೆ! ಅದು ಬರಿಯ
ಕನಸೆಂದು ತೋರುತಿದೆ. ಆದರೇನೆಲ್ಲರೂ
ಏಳುವನ್ನೆಗಮೆಲ್ಲರೂ ಮಲಗಬೇಕೇನು?
ಸೋದರನೆ, ಮೊದಲು ನೀನೆದ್ದು ಮನಸನು ಮಾಡು:
ಕಣ್ದೆರೆಯೆ ಸ್ವರ್ಗವಿದೆ! ಕಣ್ಮುಚ್ಚೆ ನರಕವಿದೆ!
ಸುಂದರ ಮಹೇಶ್ವರನ ರಸಮಯ ಶರೀರವಿದು
ವಿಶ್ವರೂಪದಿ ನಮಗೆ ತೋರುತಿದೆ. ಜೀವನಂ
ಕ್ಷಣಕ್ಷಣಕೆ ಮುಟ್ಟುತಿಹುದಾತನಂ, ಘ್ರಾಣದಲಿ
ಸ್ಪರ್ಶದಲಿ ರುಚಿಯಲ್ಲಿ, ಶ್ರೋತ್ರ ದೃಷ್ಟಿಗಳಲ್ಲಿ.
ಎದೆ ತುಂಬಿ ಬಾಳುವುದೆ ಪ್ರಾಣಕರ್ಪೂರಮಂ
ಹೊತ್ತಿಸೆತ್ತಿದ ಮಂಗಳಾರತಿ. ನಾವಂತು
ಬಾಳದಿರೆ ಬದುಕು ಬೆಳಕಿಲ್ಲದಿಹ ಬರಿಯ ಹೊಗೆ!
ನಗುತಲಿರೆ ಜಡವೆ ಚೈತನ್ಯಮಂ ಸವಿಸವಿದು,
ಚೇತಸರು ನಮಗೇಕೆ ಜಡತನಂ? ರಮಿಸುತಿವೆ
ಕಲ್ಮಣ್ಣು ಮರ ಹೂವು ನನ್ನಾತ್ಮ ಹರ್ಷಮಂ,
ಮೇಣೆನ್ನ ಸ್ಪರ್ಶಮಂ!
ಮೇಲೇಳು, ಸೋದರನೆ,
ಗೆಲುವಿನಿಂದಿದಿರುಗೊಳ್ ಉದಯಿಸುವ ಸೂರ್ಯನಂ,
ಗಿರಿಯ ನೆತ್ತಿಯ ಮೇಲೆ: ನಿನ್ನಮಲ ಹೃದಯದಲಿ
ನಾಳನಾಳಗಳಲ್ಲಿ ನೆತ್ತರಾಡಲಿ ಚಿಮ್ಮಿ
ಬಿಸಿಯಾಗಿ, ಎದೆಯುಬ್ಬೆ ಶ್ವಾಸಕೋಶದ ತುಂಬಿ
ಹೊರಬರಲಿ ತಂಪಾದ ನಿರ್ಮಲ ಸಮೀರಣಂ;
ಕಿವಿಹೊಗಲಿ ಹಕ್ಕಿಯುಲಿ; ಹೂಗಂಪು ಮೂಗಿನಲಿ

ಸಂಭೃತ ಸುವಾಸನೆಯ ನಾಕಮಂ ನಿರ್ಮಿಸಲಿ;
ಕಣ್ಣಿಗಾಗಲಿ ದಿವ್ಯಸೌಂದರ್ಯ ದರ್ಶನಂ;
ಪ್ರಜ್ಞೆಯಾಧಿಕ್ಯದಿಂ ಪ್ರಜ್ಞೆ ತಪ್ಪುವ ತೆರದಿ
ಭಾವದಾವೇಶದಲಿ ಬಾಳೆಂಬ ದಳ್ಳುರಿಯ
ನಾಲಗೆಯು ನಾಕ ನೀಲವ ನೆಕ್ಕುವಂತಾಗೆ,
ಜೀವಗಿರಿ ಶೃಂಗದಲಿ ತುಂಗ ಗೋಪುರವಾಗಿ
ಮೆರೆಯಯ್ಯ, ಕಲೆಯ ಮಹಿಮೆಗೆ ಮಹಾ ಸಾಕ್ಷಿಯಾಗಿ!

೧೩-೩-೩೪

---

* ಒಂಟಿಕೊಪ್ಪಲಿನ ಜಲಾಶಯ ದಿಬ್ಬದಲ್ಲಿ ನಿಂತು ಭಾವ ಸಂವತ್ಸರದ ಶುಕ್ಲಪಕ್ಷದ ಚೈತ್ರ ಪಂಚಮಿಯ ಸೂರ್ಯೋದಯದ ಸಮಯದಲ್ಲಿ.

## 15. ದೇವರು ರುಜು ಮಾಡಿದನು

ದೇವರು ರುಜು ಮಾಡಿದನು;
ರಸವಶನಾಗುತ ಕವಿ ಅದ ನೋಡಿದನು!

ಬಿತ್ತರದಾಗಸ ಹಿನ್ನೆಲೆಯಾಗಿರೆ
ಪರ್ವತದೆತ್ತರ ಸಾಲಗೆಸೆದಿರೆ
ಕಿಕ್ಕಿರಿದಡವಿಗಳಂಚಿನ ನಡುವೆ
ಮೆರೆದಿರೆ ಜಲಸುಂದರಿ ತುಂಗೆ
ದೇವರು ರುಜು ಮಾಡಿದನು,
ರಸವಶನಾಗುತ ಕವಿ ಅದ ನೋಡಿದನು!

ನದಿ ಹರಿದಿತ್ತು; ಬನ ನಿಂತಿತ್ತು;
ಬಾನ್ ನೀಲಿಯ ನಗೆ ಬೀರಿತ್ತು.
ನಿರ್ಜನ ದೇಶದ ನೀರವ ಕಾಲಕೆ
ಖಗರವ ಪುಲಕಂ ತೋರಿತ್ತು.
ಹೂಬಿಸಿಲಲಿ ಮಿರುಗಿರೆ ನಿರಿವೊನಲು
ಮೊರೆದಿರೆ ಬಂಡೆಗಳಲಿ ನೀರ್ದೊದಲು

ರಂಜಿಸ ಇಕ್ಕೆಲದಲಿ ಹೊಮ್ಮಳಲು
ಸಿಬ್ಬಲುಗುಡ್ಡೆಯ ಹೊಳೆಯಲಿ ಮೀಯುತ
ಕವಿಮನ ನಾಕದಿ ನೆಲಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!

ದೃಶ್ಯದಿಗಂತದಿನೊಮ್ಮೆಯೆ ಹೊಮ್ಮಿ
ಗಿರಿವನ ಪಟದಾಕಾಶದಲಿ
ತೇಲುತ ಬರಲ್ಕೆ ಬಲಾಕಪಂಕ್ತಿ
ಲೇಖನ ರೇಖಾನ್ಯಾಸದಲಿ,
ಅವಾಙ್ಮಯ ಛಂದಃಪ್ರಾಸದಲಿ,
ಸೃಷ್ಟಿಯ ರಚನೆಯ ಕುಶಲತೆ ಚಂದಕೆ

ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹೆನೆಂಬಂದದಿ
ಬೆಳ್ಳಕ್ಕಿಯ ಹಂತಿಯ ಆ ನೆವದಿ
ದೇವರು ರುಜು ಮಾಡಿದನು:
ರಸವಶನಾಗುತ ಕವಿ ಅದ ನೋಡಿದನು!*

೨೮-೧-೧೯೩೭

---

* ಸ್ಥಳಪರಿಚಯಕ್ಕೆ “ಮಲೆನಾಡಿನ ಚಿತ್ರಗಳು” ನೋಡಿ.

## 16. ಇಂದ್ರ ದಿಗಂತದಿ

ಇಂದ್ರ ದಿಗಂತದಿ ದೂರಾದ್ದೂರಂ
ಪ್ರಾತಃ ಸ್ವರ್ಗದ ಸ್ವರ್ಣದ್ವಾರಂ
ನೋಡದೊ ತೆರೆಯುತಿದೆ;
ಲೋಕದ ನಯನಕ್ಕೋಕುಳಿಯೆರಚುತೆ
ಮೋಹಿಸಿ ಕರೆಯುತಿದೆ!

ಮುಗಿಲಿನ ಬೂದಿಯ ಕುಂಕುಮಗೈಯುತೆ
ಮಳೆಬಿಲ್ ರೇಶ್ಮೆಯ ಚೆಂಬಲೆ ನೆಯ್ಯುತೆ
ಹೊಂದೊರೆ ಹರಿಯುತಿದೆ;
ಕಾಸಿದ ಚಿನ್ನದ ಪುತ್ತಳಿಯಂದದಿ
ಕವಿಮೆಯ್ ಮೆರೆಯುತಿದೆ!

ಕಾಣಿದೊ ಸರಸಿಯ ಜಲವಿಸ್ತೀರ್ಣಂ
ಸ್ವರ್ಣದ್ರವವೆನೆ ಸುಮನೋವರ್ಣಂ
ರತಿಯೋಕುಳಿಯಂತೆ!
ಶ್ರೇಷ್ಠತೆ ಸಂಸರ್ಗಿಸೆ ಸಾಮಾನ್ಯತೆ
ಹೊಳೆಯದೆ ಹೊನ್ನಂತೆ?

ಉಷೆಯೀ ವೈಭವ ದೃಶ್ಯವ ಹೀರಿ
ಸವಿದಿಹೆನೆನಿತೋ ಸಾವಿರ ಸಾರಿ,
ಚೆಂದುಟಿ ಜೆನಂತೆ!
ನಲಿದಿಹುದೆದೆ ಇಂತೇ ಪ್ರತಿಸಲವೂ
ಅದೆ ಮೊದಲೆಂಬಂತೆ!

೧೪-೧೦-೧೯೩೫

## 17. ಜಡಿಮಳೆ

ಮುಸಲ ವರ್ಷ ಧಾರೆ
ಮುಗಿಲಿನಿಂದ ಸೋರೆ
ಕುಣಿವ ನವಿಲು ನನ್ನ ಮನಂ,
ನಲ್ಮೆಯುಕ್ಕಿ ಮೀರೆ!

ಹಸುರು ಬಯಲ ಮೇಲೆ
ಬಾಣ ಜಾಲದೋಲೆ
ಮಳೆಯ ಹನಿಗಳೆರಗಲೊಡಂ
ತುಂತುರಾವಿ ಲೀಲೆ!

ತಲೆಯ ಕೆದರಿ ಕಾಳಿ
ಕುಣಿವ ತರೆನ ತಾಳಿ
ಪವನ ಹರಿಯು ಗರ್ಜಿಸಿಹಂ
ವಿಪಿನ ಕರಿಯ ಸೀಳಿ!

ನೀರು, ನೀರು, ನೀರು!
ಕಾರುತಿಹುದು ಕಾರು!
ನೋಡುತಿರುವ ಕವಿ ನಯನಂ
'ನಂದದಿಂದೆ ನೀರು'!

೪-೯-೧೯೩೩

## 18. ಪೊಂಗುಳಿ ಅಥವಾ ಮಳೆಕೋಗಿಲೆ

ಮಲೆಗಳೆಡೆಯ ಕಣಿವೆಯಲ್ಲಿ
ಬಯಲ ಗದ್ದೆ ಕೋಗಿನಲ್ಲಿ
ಬಳಲಿ ಬರುತಲಿದ್ದ ನಾನು
ಕಿವಿ ನಿಮಿರ್ದು ಕೇಳಿದೆ:
ಬೆರಗಿನಿಂದೆ ಮುಖವನೆತ್ತಿ
ಕಂಡೆ, ಕೇಳ್ದೆ, ದಣಿವ ಮರೆತೆ,
ಉಲ್ಲಾಸವ ತಾಳಿದೆ!

ಬಿಳಿಯ ಮುಗಿಲ ನೀಲಿ ಬಾನು;
ಮುಗಿಲ ಮರೆಯ ಹಗಲ ಭಾನು;
ಸುತ್ತ ಮಲೆತ ಮಲೆಯ ಕಾನು.
ಇಂತಹ ಹಿನ್ನೆಲೆಯಲಿ
ರೆಂಕೆಗೆದರಿ ಬಿಂಕದಿಂದೆ
ಚಕ್ರಗತಿಯೊಳಲೆದು ತೇಲಿ,
ವಕ್ರಗಮನ ಗಗನ ಕೇಲಿ
ಕಣ್ಗೆ ಮನಕೆ ಸೊಗಸುವಂತೆ
ಹಾರುತಿತ್ತು ಪೊಂಗುಳಿ;
ಚಿಮ್ಮುತಿತ್ತು ಚಲನೆಯೋಲೆ
(ನಾದದೊಂದು ರಾಸಲೀಲೆ!)
ಇಂಪುದನಿಯ ಸರಳ ಮಾಲೆ,
ಚೀರುವದರ ನೀಳುಲಿ!
ಇನಿತು ಮಧುರನಾದಗೈವ
ಪೊಂಗುಳಿಯಿದೆ? ಪಕ್ಷಿದೈವ!
ನೋಟಕದೂ ಒಂದು ಹದ್ದು!
ಕಿವಿಗೊ?-ಚೈತ್ರ ಪಿಕದ ಸದ್ದು!
ಆಲಿಸಯ್ಯ ಮಲೆಯ ಕವಿ:
ಎನಿತು ಇಂಪು, ಏನು ಸವಿ;
ದನಿಯ ಜೇನ್ಗೆ ಜಿಹ್ವೆ ಕಿವಿ!
ಮಳೆಕೋಗಿಲೆ ಎಂಬ ಹೆಸರು
ನಿನಗೆ ಕೊಸರೆ? ಅಲ್ಲ, ಮೊಸರು!

ದಿಟವಾದರೆ ಮುಗಿಲನಲೆವ
ನೀನು ‘ಮಳೆಯ ಕೋಗಿಲೆ’,
ಆತ್ಮ ತೊಯ್ಯುವಂತೆ ಬರಲಿ
ನಿನ್ನ ಕೊರಲ ಜೇನ್ಮಳೆ!
ನಿನ್ನ ಉಲಿಹು ಸಗ್ಗದ ಕರೆ:
ಆಲಿಸುತಿದೆ ನಮ್ಮೀ ಧರೆ;
ಹಾರು, ಹಾಡು, ಪೊಂಗುಳಿ!
ಬಾಳ ಕಣಿವೆಯಲ್ಲಿ ತೊಳಲಿ
ನಡೆವ ವೇಳೆ ನಾನು ಬಳಲಿ
ಇಂತೆ ಬರಲಿ ನಿನ್ನುಲಿ;
ಉಲ್ಲಾಸವನೆದೆಗೆ ಮನಕೆ
ಇಂತೆ ತರಲಿ ಪೊನ್ನುಲಿ!
ಇಂತೆ ನಲಿ, ಇಂತೆ ಉಲಿ,
ಇಂತೆ ಬಾ, ಪೊಂಗುಳಿ!

೨೭-೫-೧೯೩೫

## 19. ಬರಲಿ ಜಡದ ಬಡತನಕ್ಕೆ ಜೀವದೈಸಿರಿ

ಅಃ! ಮತ್ತದೊಮ್ಮೆ ಉಲಿ!
ಹಕ್ಕಿ, ಮತ್ತದೊಮ್ಮೆ ನಲಿ!
ಬತ್ತಿದೆದೆಗೆ ಬರಲಿ ನಿನ್ನ
ಗಾನದೊಳ್ಸರಿ!
ಬರಲಿ ಜಡದ ಬಡತನಕ್ಕೆ
ಜೀವದೈಸಿರಿ!
ರಸದ ಹನಿ
ನಿನ್ನ ದನಿ!
ಹಾಡು ಮತ್ತದೊಮ್ಮೆ, ಹಕ್ಕಿ!
ನಿನ್ನ ಪ್ರಾಣಲಹರಿಯುಕ್ಕಿ
ಜಗತ್ ಪ್ರಾಣನಾಡಿಯಲ್ಲಿ
ಹರುಷ ಹರಿಯಲಿ!

ಜಡದಪಾರ ಭಾರದಲ್ಲಿ
ಜೀವವುರಿಯಲಿ!
ಜಗನ್ನೇತ್ರ ಜೋಂಪಿಸುತಿದೆ
ಮೌನ ಭಾರದಿ!
ಚೈತನ್ಯವೆ ನಿದ್ರಿಸುತಿದೆ
ಜಡದ್ವಾರದಿ!
ಬಣ್ಣಗರಿ,
ವೀಣೆಮರಿ,
ಹಾಡು, ಹಕ್ಕಿ, ಮತ್ತದೊಮ್ಮೆ,
ಇಳಿಯುವಂತೆ ಜಡದ ಹೆಮ್ಮೆ!
ಅಃ! ಮತ್ತದೊಮ್ಮೆ ಉಲಿ!
ಹಕ್ಕಿ, ಮತ್ತದೊಮ್ಮೆ ನಲಿ!
ಬತ್ತಿದೆದೆಗೆ ಬರಲಿ ನಿನ್ನ
ಗಾನದೊಳ್ಸರಿ;
ಬರಲಿ ಜಡದ ಬಡತನಕ್ಕೆ
ಜೀವದೈಸಿರಿ!

೨೦-೧೧-೧೯೨೪

## 20. ಹಸುರು

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!

ಆಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!

ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

ಹೊಸ ಹೂವಿನ ಕಂಪು ಹಸುರು,
ಎಲರಿವ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು;
ಹಸುರು ಹಸುರಿಳೆಯುಸಿರೂ!

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!*

೧೧-೧೦-೧೯೩೭

---

* ಆಶ್ವೀಜಮಾಸದಲ್ಲಿ ‘ಕವಿಶೈಲ’ದ ನೆತ್ತಿಯಲ್ಲಿ ದೊರೆಕೊಂಡ ರಸಾನುಭೂತಿ.

## 21. ಭಾದ್ರಪದದ ಬಯಲು ಸೀಮೆ

ನಾನು ನಾಯಿ ಮೆಟ್ಟು ಕೊಡೆ
ನಾಲ್ವರೆ ತಿರುಗಾಟಕೆ
ಹೊರಟೆವಂದು ನಸುಕು ಬಿಡೆ
ಬೆಳಗು ಸಿರಿಯ ನೋಟಕೆ:
ಬಾನು ಬುವಿ ಮುಗಿಲು ರವಿ

ಹೊರಟರೊಡನೆ ನಮ್ಮ ಒಡನೆ
ರಸದೌತಣದೂಟಕೆ!

ಸಹ್ಯಾದ್ರಿಯ ಪ್ರಕೃತಿಭಾಮೆ
ಸೌಂದರ್ಯ ಪರಾಕ್ರಮಿ;
ಭಾದ್ರಪದದ ಬಯಲು ಸೀಮೆ
ರಮ್ಯತೆಯಲಿ ಸಂಯಮಿಃ
ಅಡವಿಹುಚ್ಚು ಬೆಟ್ಟಗೆಚ್ಚು
ಇಲ್ಲದದಕೆ ಮಿತಿಯೆ ಮೆಚ್ಚುಃ
ಸೊಬಗಿನೊಳೂ ಸಂಯಮಿ!

ಹಳದಿ ಹೊನಲು ಹರಿದು ಹೋಯ್ತು;
ಮತ್ತೆ ಕೆಂಪಿನೋಕುಳಿ;
ಮದುವೆಯಾಯ್ತು ಒಸಗೆಯಾಯ್ತು
ಉಷೆಗೆ ಮೂಡುಬಾನಲಿ!
ಕಂಪಿನುಸಿರನೆಸೆಯೆ ಸುಸಿಲು
ಹುಟ್ಟಿ ಬಂತು ಹಸುಳೆಬಿಸಿಲು;
ಹಬ್ಬವಾಯ್ತು ಹೊಲದಲಿ!

ಗುಬ್ಬಳಿಸಿದುವೆನಿತೊ ಚೋರೆ
ಮರದ ಸೊಪ್ಪಿನೊಡಲಲಿ;
ಕಿವಿಯೆ ದೋಣಿಯಾಯ್ತು ಬೇರೆ
ಹಕ್ಕಿದನಿಯ ಕಡಲಲಿ
ಮೆಯ್ಯ ತೋರೆ ಹೊನ್ನ ಹೊತ್ತು
ಪಡುವಣೆಡೆಗೆ ನೀಳವಾಯ್ತು
ನೆರಳು ಮರದ ಬುಡದಲಿ!

ಜೋಳದ ಬೆಳೆ ಕೊಯ್ಯಲಾಯ್ತು
ಬಣಬೆಯಾಯ್ತು ಹೊಲದಲಿ;
ನೆತ್ತರರ್ಧ ಸೇರ್ವೆಯಾಯ್ತು
ಒಕ್ಕಲಿಗನ ಬಲದಲಿ!
ಹುರುಳಿ ರಾಗಿ ಹರಳು ತೊಗರಿ
ಹಸುರ ಬೀಸುತಿಹವು ಚಿಗುರಿ
ಮತ್ತೆ ಉತ್ತ ನೆಲದಲಿ!

ಕಣಿವೆಗಿಳಿದು ಬೋರೆಗೇರಿ
ಜೇನ್‌ಗನಸಿನ ಪಾಲೊಳು
ನಿಲ್ಲುತೊಮ್ಮೆ ನಡೆಯುತೊಮ್ಮೆ
ಕಣ್‌ನಾಲಗೆ ತೇಲಲು,
ಕಬ್ಬಿಗನೆದೆಯೆ ಕಬ್ಬಿಣಗಾಣ,
ಕಬ್ಬು ಅದಕೆ ಜಗತ್‌ಪ್ರಾಣ,
ಕಬ್ಬವೆ ರಸವಾಗಲು!

ಮಲೆಯ ಹೊಣ್ಣೊ? ಬಯಲ ಹೆಣ್ಣೊ?
ಒಲುಮೆ ಇದ್ದರೆದೆಯಲಿ
ಎಲ್ಲ ಚೆನ್ನು, ಎಲ್ಲ ಹೊನ್ನು!
ಭೇದವಿಹುದೆ ಬೆದೆಯಲಿ?
ಮಲೆಯ ನೆಲವೊ? ಬಯಲ ಹೊಲವೊ?
ಬೇರೆ ಧೇನು;-ಆದರೇನು
ಅಮೃತವಿರದೆ ಸೊದೆಯಲಿ?

೧೦-೯-೧೯೩೭

## 22. ಮಾಗಿ ಬರುತಿದೆ

ನೋಡು, ನೋಡು, ಕುಳಿರ ಬೀಡು ಮಾಗಿ ಬರುತಿದೆ!
ಹಲ್ಲ ಕಡಿದು ಮುಷ್ಟಿ ಹಿಡಿದು ಸೆಡೆತು ಬರುತಿದೆ!
ಐಕಿಲದರ ತಲೆಯ ತಿರುಳು,
ಕೊರೆಯುವ ಚಳಿಯದರ ಕರುಳು,
ಬೆರೆತ ಮುಗಿಲೆ ನರೆತ ಕುರುಳು,
ಮಾಗಿ ಬರುತಿದೆ!
ನೋಡು, ನೋಡು, ಕುಳಿರ ಬೀಡು ಸಾಗಿ ಬರುತಿದೆ!

ಚಳಿಯ ಕಡಲೊಳದ್ದಿದೊಡಲೊಳದೋ ಬರುತಿದೆ!
ಸುಗ್ಗಿವಸಿರದಾವಿಯುಸಿರದಾಗಿ ಬರುತಿದೆ!
ಕುಳಿರ ಕೈಯೊಳೆದೆಯ ಮುಟ್ಟಿ,
ಗಾನ ನದಿಯ ಗಡ್ಡೆಗಟ್ಟಿ,

ಕೋಗಿಲೆಗಳ ಕೊರಲ ಕಟ್ಟಿ
ಮಾಗಿ ಬರುತಿದೆ!
ಜಗವು ಕಂಪಿಪಂತೆ ತಂಪಿನಿಂದ ಬರುತಿದೆ!

ಮೆಯ್ಯ ಮೇಲೆ ಹನಿಯು ಬೀಳೆ ಕೋತಿ ಮರದಲಿ
ಹಲ್ಲ ಕಿರಿದು, ಬೆಚ್ಚಿ ಸರಿದು, ಶಪಿಸಲುರದಲಿ,
ಮಂಜಿನುಡೆಯ ಹೊದೆದುಕೊಂಡು,
ಬಿಳಿದು ತಿಂಗಳುಣಿಸನುಂಡು,
ಚೆದರುತಿರಲು ಮುಗಿಲ ಹಿಂಡು
ಬಾನ ಬನದಲಿ,
ಬಹುದು ಮಾಗಿ ಕುರುಬನಾಗಿ ಮುದಿಯತನದಲಿ!

ಹಸುರ ಮೇಲೆ ಬಿಸಿಲ ಲೀಲೆ ತಳತಳಿಸುತಿರೆ,
ಹೊಳೆವ ಕುಳಿರ್ ಪನಿಯ ತಳಿರ್ ನಳನಳಿಸುತಿರೆ,
ಮೆದ್ದು ಮುಗಿಯೆ ಮುರದ ಮಡ್ಡಿ,
ಮುದ್ದು ಬಿಸಿಲಿಗೊಡಲನೊಡ್ಡಿ,
ದೂರ ಜಾರುತಿರಲು ದೊಡ್ಡಿ,
ರಯ್ಯ ರಯ್ಯನೆ,
ಚೆಣ್ಣ ಕರುಗಳೊಡನೆ ತುರುಗಳಲೆವುವೊಯ್ಯನೆ!

ಸುಗ್ಗಿಗೇನು ಕಡಮೆಯೇನು ನಮ್ಮ ಮಾಗಿಯು?
ಚಳಿಯನೊಂದನುಳಿದು ಬಂದರದುವೆ ಸುಗ್ಗಿಯು!
ಸುಗ್ಗಿ ಮಗುವು: ಮಾಗಿ ತಂದೆ!
ಮಾಗಿ ಬಂದರೇನು ಮುಂದೆ?
ಸುಗ್ಗಿ ಬಸಿರನೊಡೆದು ಹಿಂದೆ
ಬಂದೆ ಬರುವುದು!
ಸೊಗವ ಜಗಕೆ ನಗೆಯ ಮೊಗಕೆ ತಂದೆ ತರುವುದು!

ಮುದಿಯ ಚಳಿಯ ಮಾಗಿಯಳಿಯಲೊಡನೆ ನವವಧು
ಬರಲು, ಗಾಡಿಯಿಂದ ಮೂಡಿ ತಿರೆಯು ನಲಿವುದು!
ಸುಗ್ಗಿ ಬಸಿರನೊಡೆದು ಮೂಡೆ,
ಮಾಗಿವಾಯ ಕುಳಿರ ದಾಡೆ
ಬುಡದ ಬಲವು ಸಡಿಲಿ ಕೂಡೆ

ಬಿದ್ದು ಸೀಳ್ವುದು!
ನಮ್ಮ ಲೋಕಕೊಲಿದು ನಾಕವದ್ದ ಬೀಳ್ವುದು!

ನೋಡು, ನೋಡು, ಕುಳಿರ ಬೀಡು ಮಾಗಿ ಬರುತಿದೆ!
ನಡುಕ ಹಿಡಿದು ಹಲ್ಲ ಕಡಿದು ಸೆಡೆತು ಬರುತಿದೆ!
ತಣ್ಣಿತುಸಿರನೂದಿಸುತ್ತ
ಹಣ್ಣೆಲೆಗಳನುದರಿಸುತ್ತ,
ದೊಣ್ಣೆಯೂರಿ 'ಹುಹು' ಎನ್ನುತ್ತ
ಬಾಗಿ ಬರುತಿದೆ!
ನೋಡು, ನೋಡು, ಕುಳಿರ ಬೀಡು ಮಾಗಿ ಬರುತಿದೆ!

೧-೧೨-೧೯೩೯

## 23. ಯುಗಾದಿ

ಸುರಲೋಕದ ಸುರನದಿಯಲಿ ಮಿಂದು,
ಸುರಲೋಕದ ಸಂಪದನು ತಂದು,
ನವ ಸಂವತ್ಸರ ಭೂಮಿಗೆ ಬಂದು
ಕರೆಯುತ್ತಿದೆ ನಮ್ಮನು ಇಂದು!

ಗೀತೆಯ ಘೋಷದಿ ನವ ಅತಿಥಿಯ ಕರೆ;
ಹೃದಯ ದ್ವಾರವನಗಲಕೆ ತೆರೆ, ತೆರೆ!
ನವ ಜೀವನ ರಸ ಬಾಳಿಗೆ ಬರಲಿ,
ನೂತನ ಸಾಹಸವೈತರಲಿ!

ಗತವರ್ಷದ ಮೃತಪಾಪವ ಸುಡು, ತೊರೆ;
ಅಪಜಯ ಅವಮಾನಗಳನು ಬಿಡು, ಮರೆ;
ಕಳಚಲಿ ಬೀಳಲಿ ಬಾಳಿನ ಹಳೆಪೊರೆ,
ನವ ವತ್ಸರವನು ಕೂಗಿ ಕರೆ!

ಸಂಶಯ ದ್ವೇಷಾಸೂಯೆಯ ದಬ್ಬು;
ಸುಖ ಶ್ರದ್ಧಾ ಧೈರ್ಯಗಳನು ತಬ್ಬು.

ಉರಿಯಲಿ ಸತ್ಯದ ಊದಿನ ಕಡ್ಡಿ,
ಚಿರ ಸೌಂದರ್ಯದ ಹಾಲ್ಕಡ್ಡಿ!

ತೊಲಗಲಿ ದುಃಖ, ತೊಲಗಲಿ ಮತ್ಸರ,
ಪ್ರೇಮಕೆ ಮೀಸಲು ನವ ಸಂವತ್ಸರ!
ನಮ್ಮೆದೆಯಲ್ಲಿದೆ ಸುಖನಿಧಿ ಎಂದು
ಹೊಸ ಹೂಣಿಕೆಯನು ತೊಡಗಿಂದು!

ಮಾವಿನ ಬೇವಿನ ತೋರಣ ಕಟ್ಟು,
ಬೇವುಬೆಲ್ಲಗಳನೊಟ್ಟಿಗೆ ಕುಟ್ಟು!
ಜೀವನವೆಲ್ಲಾ ಬೇವೂಬೆಲ್ಲ;
ಎರಡೂ ಸವಿವನೆ ಕಲಿ ಮಲ್ಲ!

ಹೊಸ ಮರದಲಿ ಹೂ ತುಂಬಿದೆ ನೋಡು!
ಆಲಿಸು! ಜೇನಿನ ಹಬ್ಬದ ಹಾಡು!
ಜೀವನವೆಂಬುದು ಹೂವಿನ ಬೀಡು;
ಕವಿಯೆದೆ ಹೆಜ್ಜೇನಿನ ಗೂಡು!

ಕವಿಯೊಲ್ಮೆಯ ಕೋ! ಧನ್ಯ ಯುಗಾದಿ!
ಮರಳಲಿ ಇಂತಹ ನೂರು ಯುಗಾದಿ!
ಇದೆ ಕೋ ಹೊಸವರುಷದ ಸವಿಮುತ್ತು!
ಅದಕೊಂದಾಲಿಂಗನದೊತ್ತು!

೧೭-೩-೧೯೩೩

# 24. ಪಟ್ಟಣದಲ್ಲಿ ಹೊರಸುಹಕ್ಕಿ

ಅಃ ಅದೋ! ಆಲಿಸಲ್ಲಿ!
ಹೊದರುದಳಿರ ಮಾವಿನಲ್ಲಿ
ಹೊರಸು ಗುಬ್ಬಳಿಸುತಿದೆ!
ಅದೋ! ಮತ್ತೆ ಏನು ಸವಿ!
ಇಂದ್ರಿಯಂಗಳೆಲ್ಲ ಕಿವಿ!
ಜೀವ ಬೆಬ್ಬಳಿಸುತಿದೆ!

ದೂರ ಇರುವ ಹೃದಯ ಬಂಧು
ಹಠಾತ್ತಾಗಿ ಬಳಿಗೆ ಬಂದು
ಕರೆದು ನುಡಿವ ತೆರದಲಿ
ಏನೊ ಹರ್ಷ, ಏನೊ ಬೆರಗು,
ದೂರದ ಸ್ಮೃತಿ ತರುವ ಕೊರಗು,
ಹೊರಸಿನ ಈ ಸ್ವರದಲಿ!

ನಮ್ಮ ಹಳ್ಳಿ, ಗದ್ದೆ, ತೋಟ,
ಬೈಲು, ಬೆಟ್ಟ, ಬನದ ನೋಟ,
ತೇಲಿಬಹವು ಮನದಲಿ.-
ಮಲಯವನದ ಕಂಪುವೊತ್ತ
ಎಲರು ತೊಳಲುತತ್ತಯಿತ್ತ
ಸುಳಿದಿದೆ ಮರುವನದಲಿ!

ಇಷ್ಟು ಪುಟ್ಟ ಪ್ರಾಣಿಯಲ್ಲಿ
ಅಷ್ಟು ದೊಡ್ಡ ಮಲೆಯ ಹಳ್ಳಿ
ಕಷ್ಟವಿಲ್ಲದಡಗಿದೆ!
ನನ್ನಿಯ ನೆನಪೊಳಗೆ ಬೆಳಗೆ
ಮಣ್ಣಿನೆದೆಯ ಕಿರಿಮೆಯೊಳಗೆ
ಸಗ್ಗಕೆ ಕಣ್ ಮೂಡದೆ?

೧೪-೭-೧೯೩೪

## 25. ಹೋಗುವೆನು ನಾ

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ;
ಮಲೆಯ ನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ.
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆಃ
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕಾಡಿಗೆ!

ಬೇಸರಾಗಿದೆ ಬಯಲು ಸೀಮೆಯ ಬೋಳು ಬಯಲಿನ ಬಾಳಿದು.
ಬಿಸಿಲು, ಬೇಸಗೆ, ಬೀಸುವುರಿಸೆಕೆ; ತಾಳಲಾರದ ಗೋಳಿದು!
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆಃ
ಬಿಳಿಯ ತಿಂಗಳ ಸಿರಿ ಬನಂಗಳ ಮಲೆಯ ಮಂಗಳ ನಾಡಿಗೆ!

ಅಲ್ಲಿ ಇಂತಿರಬೇಕು, ಇಂತಿರಬಾರದೆಂಬುವುದಿಲ್ಲವೈ;
ಅಲ್ಲಿ ಹೊರೆ ಹೊಣೆಯಿಲ್ಲ; ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ;
ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆ ನಿಲ್ಲದೈಃ
ಅಲ್ಲಿ ಪ್ರೀತಿಯೆ ನೀತಿ; ಧರ್ಮಕೆ ಬೇರೆ ಭೀತಿಯೆ ಸಲ್ಲದೈ!

ಅಲ್ಲಿ ತೆರೆತೆರೆಯದ್ರಿಪಂಕ್ತಿಗಳೆಲ್ಲೆ ಕಾಣದೆ ಹಬ್ಬಿವೆಃ
ನಿಬಿಡ ಕಾನನರಾಜಿ ಗಿರಿಗಳನಪ್ಪಿ ಸುತ್ತಲು ತಬ್ಬಿವೆ.
ದೆಸೆಯ ಬಸವನ ಹಿಣಿಲ ಹೋಲಿವೆ; ಮುಗಿಲ ಚುಂಬನಗೈದಿವೆ
ತುಂಗ ಶೃಂಗಗಳಲ್ಲಿ; ದಿಕ್ತಟದಲ್ಲಿ ಸೊಂಡಿಲ ನೆಯ್ದಿವೆ!

ರವಿಯ ರಶ್ಮಿಯ ಪ್ರಜ್ಞೆಯಿಲ್ಲದ ವಿಪಿನ ನಿರ್ಜನ ರಂಗಕೆ,
ಮುಗಿಲನಂಡಲೆಯುತ್ತ ನಿಂತಿಹ ಧೀರ ಪರ್ವತ ಶೃಂಗಕೆ,
ವನ ವಿಹಂಗಸ್ವನ ತರಂಗಿತ ಪವನ ಪಾವನ ಸಂಗಕೆ,
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ!

ಅಲ್ಲಿ ಇವೆ ಕಾಜಾಣ, ಕೋಗಿಲೆ, ತೇನೆ, ಗಿಳಿ, ಕಾಮಳ್ಳಿಯು;
ಕಂಪೆಸೆವ ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ ಬಳ್ಳಿಯು.
ನೀಲಿ ಬಾನಲಿ; ಹಸುರು ನೆಲದಲಿ; ಕಂಗಳೆರಡನೆ ಬಲ್ಲವುಃ
ಅಲ್ಲಿ ಸಗ್ಗವೆ ಸೂರೆ ಹೋಗಿದೆ; ನಂದನವೆ ನಾಡೆಲ್ಲವು!

ನೆಳಲುಗತ್ತಲೆ ತೀವಿದಡವಿಯ ಹೊದರು ಹಳುವಿನ ಸರಲಲಿ
ಹುಲಿಯ ಗರ್ಜನೆ, ಹಂದಿಯಾರ್ಭಟೆ; ಕಾಡುಕೋಳಿಯ ಚೀರುಲಿಃ

ದೊಡ್ಡು, ಕಡ, ಮಿಗ, ಮುಸಿಯ, ಕೋಡಗ, ಎರಳೆ, ಸಾರಗ, ಬರ್ಕವು,
ಹಾವು, ಉಡ, ಕಣೆಹಂದಿ, ಚಿಪ್ಪಿನ ಹಂದಿ, ಮುಂಗುಸಿ, ಕುರ್ಕವು!

ಬರಿಯ ಹೆಸರುಗಳಲ್ಲ, ನನಗಿವು ಸಾಹಸಂಗಳ ಕಿಡಿಗಳು;
ಕಂಡು ಕೇಳಿದ ಕಥೆಯನೊಡಲೊಳಗಾಂತ ಮಂತ್ರದ ನುಡಿಗಳು!
ಮಗುವುತನದಿಂದಿಂದುವರೆಗಾ ಒಂದು ಹೆಸರಿನ ಚೀಲಕೆ
ಸೇರಿ ಅನುಭವ ನೂರು ಕಲ್ಪನೆ, ಬಡ್ಡಿ ಮೀರಿದೆ ಸಾಲಕೆ!

ಅಲ್ಲಿ ಮೊರೆಮೊರೆದುರುಳಿ ಬರುತಿಹ ತೊರೆಯ ತೀರದ ಹಸುರಲಿ
ಮೊಲವು ಗರುಕೆಯ ಮೇದು ಕುಳಿತಿರೆ, ಬಳಿಯ ದಡದೆಡೆ ಕೆಸರಲಿ
ಒಂಟಿಕಾಲಲಿ ನಿಂತು ಕುಕ್ಕನ ಹಕ್ಕಿ ಬೆಳ್ಳಗೆ ಮೆರೆವುದು:
ಆಹ ನೆನೆದರೆ ಸಾಕು, ನನ್ನೆದೆಯುಕ್ಕಿ ಮೈಯನೆ ಮರೆವುದು!

ಅಲ್ಲಿ ನಡುಹಗಲಲ್ಲಿ, ಮೌನದಿ ನಿದ್ದೆಗೈದಿರೆ ಬನಗಳು,
ಬಿಸಿಲ ಬೇಗೆಗೆ ಮನೆಯ ಸೇರಿರೆ ಗೆಯ್ದು ದಣಿದಿಹ ಜನಗಳು,
ತಳಿತ ಹೊಂಗೆಯ ಕರಿಯ ನೆಳಲಲಿ ಮಲಗಿ ಜೋಂಪಿಸೆ ದನಗಳು,
ಕೊಳಲನೂದುವನಾಹ ಗೋಪನು ನಲಿಯಲಾ ಮೃಗ ಮನಗಳೂ!

ಗಗನದೆತ್ತರಕೆತ್ತಿ ಕಬ್ಬಿಗನೆದೆಯನೆದ್ದಿವೆ ಗಿರಿಗಳು;
ಗಗನದಾಚೆಗೆ ಬೀಸಿ ಮನವನು ಬಹವು ಮೋಡದ ಕರಿಗಳು;
ತೇಲಿ ಮುಂದಕೆ ನುಗ್ಗಿ, ತಿರುತಿರುಗುಬ್ಬಿ ಭೀಮಾಕಾರದಿ
ತಿರೆಗೆ ಬಾನಿಗೆ ನಡುವೆ ಬಂದಪವಡಗೆ ನೀಲದ ನೀರಧಿ!

ಅಲ್ಲಿ ಮಂದಾನಿಲನು ತೆಕ್ಕನೆಯಹನು ಜಂಝಾವಾತನು;
ಧ್ಯಾನ ಮೌನದ ವಿಪಿನ ತಾನಹುದಬ್ಬರಿಪ ಪೆರ್ಭೂತನು.
ಲಲಿತ ರುದ್ರಗಳಲ್ಲಿ ಯಮಳರು: ಹೂವು ಮುಳ್ಳಿಗೆ ಆರತಿ;
ಮುಗಿಲನಿರಿಯುವ ಶಿಖರಕಾಳದ ಕಣಿವೆ ತಕ್ಕೆಯ ಪೆಂಡಿತಿ!

ಅಲ್ಲಿ ಕಾನನ ಮಧ್ಯೆ ತುಂಗೆಯು ಮುತ್ತನಿಡುವಳು ಕಣ್ಣಿಗೆ;
ದಡದೊಳಿಡಿದಿಹ ಬಿದಿರು ಮೆಳೆಗಳ ಹಸುರು ಚಾಮರ ತಣ್ಣಗೆ
ಬೀಸುಗಾಳಿಗೆ ಒಲೆಯೆ, ಭದ್ರೆಯು ತುಂಬಿ ಹರಿವಳು ನುಣ್ಣಗೆ:
ಮಲೆಯ ಬಿತ್ತರದೆದುರು ಹೊನಲುಗಳೆನಿತು ನೋಡದೊ ಸಣ್ಣಗೆ!

ಚೈತ್ರ ಸಂಧ್ಯೆಯ ಮೊಗಕೆ ಮೆತ್ತುತೆ ಮುಗಿಲಕೂದಲ ಮಸಿಯನು,
ಮುಡಿಗೆದರಿ, ಸಿಡಿಲೊದರಿ, ಝಳಪಿಸಿ ಮಿಂಚಿನುಜ್ವಲ ಅಸಿಯನು
ಬಾನ ಕರೆಯಿಂ ನುಗ್ಗಿಬಹ ಮುಂಗಾರ ಕರಿ ರಕ್ಕಸಿಯನು
ಕಾಣುತುರ್ವರೆ ನವಿರುನಿಮಿರುವಳೆಳೆಯ ಹಸುರಿನ ಸಸಿಯನು!

ಮೊದಲು ಹದಮಳೆ ತಿರೆಯ ತೊಯ್ಯಲು ಮಿಂದ ಕಾಫಿಯ ತೋಟವು
ಇಂದ್ರನಂದನದಮರ ವೃಂದಕು ಬೆರಗನೀಯುವ ನೋಟವು!
ಬೆಟ್ಟದೋರೆಯು, ಕಣಿವೆ, ತಪ್ಪಲು, ಗಿರಿಯ ನೆತ್ತಿಯೊಳೆಲ್ಲಿಯೂ
ಕಣ್ಣು ಹೋಹೆಡೆಯಲ್ಲಿ ಕಾಫಿಯ ಹೂವು: ಬೆಣ್ಣೆಯು, ಬೆಳ್ಳಿಯು!

ಗಗನದಭ್ರತೆ ಜಗದ ಶುಭ್ರತೆಯೆಲ್ಲ ಸುಂದರ ಶಾಪದಿ
ಕಾಫಿಕಾನಿಗೆ ಬಂದು ನಿಂದಿವೆ ಪುಷ್ಪಪುಣ್ಯದ ರೂಪದಿ!
ಕಣ್ಣು ತಣಿವುದು; ಮನವು ಮಣಿವುದು: ಹಾಲುಹೂವಿನ ಹೊಳೆಯಲಿ
ಅಮೃತಸ್ನಾನವೊ ಮೇಣು ಪಾನವೊ ಬಿಳಿಯ ಮುತ್ತಿನ ಮಳೆಯಲಿ!

ಹಾತೊರೆಯುತಿದೆ; ಕಾತರಿಸುತಿದೆ; ಮನಕೆ ಮನೆಗಿರ ಹಿಡಿದಿದೆ!
ನೆನಹಿನಲರಿನ ಬಂಡನಾತ್ಮದ ಭೃಂಗ ಹೊಡೆನಲಿ ಕುಡಿದಿದೆ!
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ:
ಬಿಳಿಯ ತಿಂಗಳ ಸಿರಿ ಬನಂಗಳ ಮಲೆಯ ಮಂಗಳ ನಾಡಿಗೆ!

ಮೂಡು ಬಾನಿನ ಮೊಗದಿ ಮಲರಲು ಉಷೆಯ ನಸುನಗೆ ತಾವರೆ,
ತುಂಬಿ ತುಳುಕೆ ದಿಗಂತದತ್ತಣಿನರುಣ ಕಾಂತಿಯ ಹೊಂದೊರೆ,
ಕುಸುಮಧೂಳಿಯ ಕೆದರ್ವ ಗಾಳಿಯು ಬೀಸಿ ಪರಿದಿರೆ ಕಳ್ತಲೆ,
ಏರುವೆನು ನಾ ನವಿಲುಕಲ್ಲಿಗೆ ನೇಸರುದಯವನಿದಿರ್ಗೊಳೆ!

ಸಂಜೆ ಕುಂಕುಮರಂಗಿನೋಕುಳಿಯೆರಚುತಿಳಿತರೆ ಬನದಲಿ,
ಗೂಡಿಗೋಡುವ ಹಕ್ಕಿಯಿಂಚರ ನೆಯ್ಯೆ ನಾಕವ ಮನದಲಿ,
ಹಾದಿಯಲಿ ಹೊಂಧೂಳಿಯೆಬ್ಬಿಸಿ ಗೋಗಳೈತರೆ ಹಟ್ಟಿಗೆ,
ಕಾನನದ ಕವಿಶೈಲಕೇರುವೆ, ಮನೆಯ ಮೇಲಕೆ ನೆಟ್ಟಗೆ!

ಗಾಳಿ ಸುಯ್ಯನೆ ಬೀಸಿ ಮರಗಳ ತೂಗುತುಯ್ಯಲೆಯಾಡಲು,
ಶೈಲಶೈಲಿಯ ಮೈಲಿಮೈಲಿಯ ದೂರ ದಿನಮಣಿ ಬಾಡಲು,
ಬೇಟೆಗಾರನನಡವಿಯಿಂ ಮನೆಗೆಳೆವ ಬೆಳ್ಳಿಯು ಮೂಡಲು
ಸಂಜೆಗಿರಿಯಾ ಶೃಂಗಕೇರುವೆ ದಿವ್ಯದೃಶ್ಯವ ನೋಡಲು!

ಎಲ್ಲಿ ತಿಂಗಳು ಕಾಡುಮಲೆಗಳ ಮೇಲೆ ಹಾಲ್ಮಳೆ ಸುರಿವುದೋ,
ಕಿವಿಯ ಜಿಹ್ವೆಗೆ ಎಲ್ಲಿ ಜೊನ್ನುಣಿ ತೇನೆ ಜೇನ್ಮಳೆ ಕರೆವುದೋ,
ಎಲ್ಲಿ ಕದ್ದಿಂಗಳಲಿ ತಾರಾಕೋಟಿ ಕಿಡಿಕಿಕ್ಕಿರಿವುದೋ,
ಕಾರಿನಿರುಳಲಿ ಮಿಂಚುಹುಳುಗಳ ಸೇನೆ ಕತ್ತಲೆಗಿರಿವುದೋ,

ಎಲ್ಲಿ ಹಸುರನು ಚಿಮ್ಮಿ ಕಣ್ಣಿಗೆ ಪೈರುಪಚ್ಚೆಯು ಬೆಳೆವುದೋ,
ಎಲ್ಲಿ ಗದ್ದೆಯ ಕೋಗು ಪವನನ ಹತಿಗೆ ತೆರೆತೆರೆಯೊಲೆವುದೋ,
ಬಿಂಗಗಣ್ಗಳ ಮಲೆಯ ಹೆಣ್ಗಳ ದಿಟ್ಟಿಯೆಲ್ಲೆದೆ ಸೆಳೆವುದೋ,
ಎಲ್ಲಿ ಕಾಲವು ತೇಲಿ ಸುಖದಲಿ ತಿಳಿಯದಂತೆಯೆ ಕಳೆವುದೋ,

ಅಲ್ಲಿಗೈದುವೆನಲ್ಲಿಗೈದುವೆನಿಲ್ಲಿ ಬೇಸರವಾಗಿದೆ:
ಕಾಡುಮಲೆಗಳನಲೆವ ಹುಚ್ಚಿನ ಕಿಚ್ಚು ಹೃದಯದಿ ರೇಗಿದೆ!
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ:
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ!

ಅಲ್ಲಿ ಭಾವದ ಬೆಂಕಿಹಕ್ಕಿಯ ಮಿಂಚುರೆಕ್ಕೆಯನೇರುವೆ:
ಧರಣಿ, ದಿನಮಣಿ, ತಾರೆ, ನೀಹಾರಿಕೆಯ ನೇಮಿಯ ಮೀರುವೆ!
ಕಾಲದಾಚೆಗೆ, ದೇಶದಾಚೆಗೆ, ಚಿಂತೆಯಾಚೆಗೆ ಹಾರುವೆ:
ಕಾವ್ಯಕನ್ಯಾ ಶ್ರಾವ್ಯಕಂಠದೊಳಾತ್ಮಭೂತಿಯ ಸಾರುವೆ!

ನಗರ ನಾಗರಿಕತೆಯ ಗಲಿಬಿಲಿ ಅಲ್ಲಿ ಸೋಂಕದು, ಸುಳಿಯದು.
ದೇಶದೇಶದ ವೈರಯುದ್ಧದ ಸುದ್ದಿಯೊಂದೂ ತಿಳಿಯದು.
‘ತಿಳಿಯದಿರುವುದೆ ತಿಳಿವು’ ಎಂಬುವ ನನ್ನಿ ಆಯೆಡೆ ತಿಳಿವುದು.
‘ತಿಳಿಯೆ ನೋವಿರೆ, ತಿಳಿಯದಿರುವುದೆ ಜಾಣ್ಮೆ’ ಎಂಬರಿವುಳಿವುದು!

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ:
ಮಲೆಯನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ.
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ:
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ!

೨೭-೭-೧೯೩೫

## 26. ಗಾನ

ದೂರಕೆ ದೂರಕೆ ಬಹು ಬಹು ದೂರಕೆ
ಹಾರುವೆ ಗಾನ ವಿಮಾನದಲಿ;
ಮುಗಿಲಿನ ದೂರಕೆ, ಗಗನದ ದೂರಕೆ,
ಶಶಿ ರವಿ ತಾರೆಗಳಾಚೆಯ ತೀರಕ್ಕೆ,
ಮಾತಿಗೆ ನಿಲುಕದ ಭವ್ಯ ಅಪಾರಕೆ,
ಮನಸಿಗೆ ನಿಲುಕದ ದಿವ್ಯ ಅತೀತಕೆ,
ದೂರಕೆ ದೂರಕೆ ಬಹು ಬಹು ದೂರಕೆ,
ಹಾರುವೆ ಗಾನ ವಿಮಾನದಲಿ!
ಹಾರುತ ಹಾರುತ ಭೂರ್ಭುವಸ್ಸ್ವರ್ಗಳನ್
ಆತ್ಮ ವಿಲಯದಲಿ ತಬ್ಬುವೆನು.
ಬಿಸಿಲಿಗೆ ಹಬ್ಬುವ ಮಂಜಿನಂದದಲಿ
ಲೋಕ ಲೋಕಗಳ ಹಬ್ಬುವೆನು!

೨೧-೧೧-೧೯೩೩

## 27. ಆಕಾಶದ ಹೆಬ್ಬಯಲಿನಲಿ

ಆಕಾಶದ ಹೆಬ್ಬಯಲಿನಲಿ
ಬೆಚ್ಚನೆ ಬಿಸಿಲಿನಲಿ
ಚಳಿಕಾಯುತ್ತಿವೆ
ಅಲೆಯುತ್ತಿವೆ
ಸುತ್ತುತ್ತಿವೆ
ಬಿಳಿ ಮುಗಿಲಿನ ಮುಂದೆ
ಹಿಂದೆ ಮುಂದೆ!

ನನ್ನಿಳೆಯೀ ಹಸುರ್ಬಯಲೀ
ಎಳೆ ಗರುಕೆಯ ಹಾಸಿನಲಿ
ಚಲಿಸದವೊಲೆ ಚಲಿಸುತ್ತಿವೆ
ಮೇಯುತ್ತಿಹ ಗೋವು!

ಮೃದುಗಾಳಿಯು ಬೀಸುತ್ತಿರೆ
ಹರೆಹರೆಯಲಿ ತಳಿರೆಲೆಯಲಿ
ಮರ್ಮರ ದನಿಗೈಯುತ್ತಿದೆ
ಎಲೆ ತುಂಬಿದ ಮಾವು
ಹೊಸ ಹಸಲೆಯ ಹಸುರೆದೆಯಲಿ
ಮುದ್ದಾಗಿಹ ಬಿಳಿ ಕುರಿಮರಿ
ನೆಗೆಯುತ್ತಿರೆ ಚಿಗಿಯುತ್ತಿರೆ,
ಕಂಠದೊಳಿಹ ಕಿಂಕಿಣಿಯೂ
ಟಿಂಟಿಣಿ ಟಿಣಿ ಟಿಂಟಿಣಿ ಟಿಣಿ
ಸಂತೋಷವ ಘೋಷಿಸುತಿರೆ
ಸುಖವಲ್ಲವೆ?-ಪೇಳಲ್ಲವೆ
ಈ ಬಾಳಿನ ನೋವೂ?

ಎಲ್ಲೆಲ್ಲಿಯು ಯಾರಲ್ಲಿಯು
ಉದ್ವೇಗವೆ ಇಲ್ಲ;
ಸೂಸುತ್ತಿದೆ ಹರಿಯುತ್ತಿದೆ
ತುಂಬುತ್ತಿದೆ ತುಳುಕುತ್ತಿದೆ
ಬಾಳಿನ ಜೇನ್ಬೆಲ್ಲ!
ಎಲ್ಲವು 'ಇವೆ'! ಸುಮ್ಮನೆ 'ಇವೆ'!
ಅರಿಯುವ ಗೋಜಿಲ್ಲ!
ಮನುಜನು ನಾನ್ ಎನ್ನೆದೆಯಲಿ
ಅರಿವೆಂಬುವ ಬಾವು
ಕೀವಾಗಿರೆ ನೋವಾಗಿರೆ
ಬಾಳ್ಬೆಲ್ಲವೆ ಬೇವು!

೧೮-೯-೧೯೩೪

# ೨೮. ಕಿಟಕಿ-ಕಣ್ಣು

ಮನೆಯ ಮೆಯ್ಗೆ ಕಿಟಕಿ ಕಣ್ಣು;
ಕವಿ ಕೊಟಡಿಯ ಜೀವನು.
ಮನೆಯ ಗುಡಿಗೆ ಕಿಟಕಿ ಪಡಿಮೆ:
ಕಲೆಯ ಕಣ್ಣಿಗೇನು ಕಡಿಮೆ?
ಪ್ರತ್ಯಕ್ಷನು ದೇವನು!

ಕೊಟಡಿಯ ಕುರ್ಚಿಯೊಳಿದ್ದವನೇಕೊ
ಕಿಟಕಿಯ ಕಡೆ ನೊಡಿದೆನಕ್ಕೊ!-
ಬಿತ್ತರದಾಕಾಶದ ತಿಳಿನೀಲಿ
ದೂರದ ಶಾಂತ ಸಮುದ್ರವ ಹೋಲಿ
ಮೆರೆದಿದೆ, ಕಿಟಕಿಯ ಚೌಕವ ತುಂಬಿ,
ಗೆರೆಯೆಳೆದಂತಿರೆ ಸರಳಿನ ಕಂಬಿ,
ಶಾರದ ನೀರದವೊಂದಿನಿತಿಲ್ಲ;
ನೀಲಿಯೆ, ನೀಲಿಯೆ; ನೀಲಿಯ ಎಲ್ಲ.
ಕಾಯ್ದಿದ್ದಿತು ಬಿಸಿಲಿನ ಹಗಲು,
ಸದ್ದಿಲ್ಲದ ನಿದ್ದೆಯೆ ಹಗಲು!
ನಿಶ್ಚಲವಾಗಿರೆ ನೀಲಿಯೆ ನೀರಧಿ,
ನೀಲಾಕಾಶದ ಓ ಆ ದೂರದಿ
ಬೆಳ್ಳಿಯ ಮುಗಿಲಿನ ಚೂರುಗಳಂತೆ
ಬೆಳ್ಳಕ್ಕಿಯ ಜೊತೆ ಹಾರಾಡುತ್ತಿವೆ;
ಮುಕ್ತಿಯ ಪಡೆವಮಲಾತ್ಮಗಳಂತೆ
ಶೂನ್ಯದಂಚಿನೊಳೆ ಹೊಂಚಾಡುತ್ತಿವೆ!
ದೃಷ್ಟಿಯೆ ದಣಿವಂದದೊಳಾ ಹಕ್ಕಿ
ಏರುತ್ತೇರುತ್ತಾಗಿವೆ ಚುಕ್ಕಿ!
ಅಃ! ಇಲ್ಲಾದುವೆ ಶೂನ್ಯಂಬೊಕ್ಕು,
ಕಣ್ಣಾಚೆಗೆ ಕಲ್ಪನೆಗೂ ಮಿಕ್ಕು!
ನೋಡುತ ನೋಡುತ ನೋಡುತ ನಾನೂ
ಮೇಲ್‌ಮೇಲೇರಿದೆನಾದೆನು ಬಾನು...!

ಮನೆಯ ಮೆಯ್ಗೆ ಕಿಟಕಿ ಕಣ್ಣು;
ಕವಿ ಕೊಟಡಿಯ ಜೀವನು.
ಮನೆಯ ಗುಡಿಗೆ ಕಿಟಕಿ ಪಡಿಮೆ:
ಕಲೆಯ ಕಣ್ಣಿಗೇನು ಕಡಿಮೆ?
ಪ್ರತ್ಯಕ್ಷನು ದೇವನು!

೨೬-೯-೧೯೩೫

## ೨೯. ಸಾಮಾನ್ಯ ಬೀದಿ

ಹಿನ್ನೆಲೆಯನು ರಚಿಸಿರೆ ಸಂಜೆ
(ಹೆತ್ತಳೊ ಎನೆ ಬಂಜೆ!)
ನೋಡಾಗಿದೆ ಸಗ್ಗಕೆ ಹಾದಿ
ಸಾಧಾರಣ ಬೀದಿ!

ಬೇರೆಯ ಸಮಯದಿ ಈ ಬೀದಿ
ಬೆಳಕಿಲ್ಲದ ಬೂದಿ:
ಇಕ್ಕೆಲದಲಿ ತಂತಿಯ ಕಂಬ;
ಮಸಿಮುಸುಡಿಯ ಜಂಬ!
ಮನೆಗಳು ಕೆಲವಿವೆ, ಸಾಮಾನ್ಯ;
ಸೌಂದರ್ಯಕೆ ಅನ್ಯ!

ಪಡುವಣ ದೆಸೆಗೇರಿದೆ ರಸ್ತೆ;
ಅದೊ ಬರಿ ದುರವಸ್ಥೆ!
ಆದರೆ ಸಂಧ್ಯಾಕಾಲದಲಿ,
(ಬೆಕ್ಕಾದಂತೆ ಹುಲಿ!)
ಅತಿ ಸಾಮಾನ್ಯದ ಈ ಬೀದಿ,
ಕಾಣ್, ಸ್ವರ್ಗಕೆ ಹಾದಿ!

# ೨೦. ರಸಾನುಭೂತಿ

ಮುಳುಗುತಿದೆ ವರುಣದಿಕ್ಕಿನಲಿ ಮೃಗಶಿರ ರಾಶಿ;
ತಳಿಸುತಿಹುದುಜ್ವಲೋತ್ತಮ ಮೃಗವ್ಯಾಧನುಂ
ಕಿರಣಸೂಜಿಯ ಬಾಣಗಳ ಪರಂಪರೆಯೆಚ್ಚು;
ಸಪ್ತರ್ಷಿಮಂಡಲಂ ಸ್ವಾತಿ ಚಿತ್ರೆಯರೊಡನೆ
ಗಗನ ಮಧ್ಯದಿ ನಿಂದು ರಂಜಿಸಿದೆ; ಶುಕ್ರನುಂ
ಮೂಡಲಿಂ ಬಹು ಮೇಲಕ್ಕೆತಂದು, ಬೆಳ್ಳಿಹನಿ
ಎಂಬಂತೆ, ತಿಂಗಳಿಲ್ಲದ ಬಾನ್ಗೊಡೆಯನಾಗಿ,
ಮಿಣುಕದೆಯೆ ಚೆಲ್ಲುತಿರುವನು ರಜತದೀಪ್ತಿಯಂ;
ಚಾಮುಂಡಿ ಗಿರಿಯಾಚೆ ಶಸ್ತ್ರಕಾಂತಿಯ ನಭದ
ಪಟದಲ್ಲಿ ಹೆಡೆಯೆತ್ತುತಿಹುದು ವೃಶ್ಚಿಕರಾಶಿ,
ಮಣಿಯ ತ್ರೈಫಣೆಯುರಗನಂತೆ, ಬಾಲವನಡಗಿ
ಬೆಟ್ಟದಾಚೆಯಲಿ; ಬಳಿಯಲ್ಲಿ ಗುರು ಬೆಳಗುತಿದೆ
ಬೆಳ್ಳಿಗೆರಡನೆಯಾಗಿ ಹೊಳಹಿನಲಿ. ತುಂಬಿಹುದು
ಶಾಂತಿ, ನಿಶ್ಚಲಗಗನದಾದ್ಯಂತಮಂ!

ಭೂಮಿ
ಪ್ರತಿಬಿಂಬಿಸಿದೆ ನಭಶ್ಶಾಂತಿಯನು, ಮೌನದಿಂ;
ಕಾಂತಿಯನು, ಅಗಣಿತ ತಟಿದ್ದೀಪ ರಾಜಿಯಿಂ.
ದೂರದಾ ಹಳ್ಳಿಯಿಂ ಬಹ ಭಜನೆ ಕೀರ್ತನೆಯ
ನಾದವೂ ಕೆಡಿಸದೀ ಮೋನಮಂ ಪೋಷಿಸಿದೆ.
ನಿಶ್ಚಲಂ ನೀರವಂ ರಮ್ಯಂ ಇಳಾ ನಿದ್ರೆ!

ಹಬ್ಬಿಹ ಸರೋವರಂ, ವನಸದೃಶ ತರುರಾಜಿ,
ತರುಮಧ್ಯೆಯಲ್ಲಲ್ಲಿ ಭವ್ಯ ಸೌಧಾಗ್ರತತಿ,
ನಕ್ಷತ್ರಮಾಲೆಯಿಂ ಮೆರೆವುದೆನೆ ಚಾಮುಂಡಿ,
ಮೇಣಾಚೆ, ಮೆಲ್ಲಮೆಲ್ಲನೆ ಬೆಳ್ಳಗಾಗುತಿಹ
ಮೂಡಣದ ಬಾನು-ಒಂದಾದ ಮೇಲೊಂದೆಲ್ಲ
ಚಿತ್ರದಲಿ ಬರೆದಂತೆ ಮನವ ಸಂಮೋಹಿಸಿವೆ,
ಕವಿಮನವನದ್ದಿ ರಸ ಸುಖ ಮಧು ತಟಿನಿಯಲ್ಲಿ!

ಸರೋವರದೊಳೊಂದು ಕಿರುತೆರೆಯಿಲ್ಲ; ನಲ್‌ಕೆರೆಯ
ಮೇಲುಮೈ ನುಣ್ಪುವೆತ್ತೆಸೆಯುತಿದೆ, ಬಿತ್ತರದ
ಕನ್ನಡಿಯ ಹೋಲಿ. ಕಾಣ್ ಅದೊ: ಚೆಲ್ವಿ ಸರಸಿಯಾ
ಶೀತಲ ವಿಭಾ ರಮ್ಯ ಸಲಿಲ ಮುಖ ಮುಕುರದಲಿ
ಮರುಬಿಂಬಿಸಿಹ ಪೃಥಿವಿ, ರಸಲೋಕವನೆ ಮೀರಿ
ಶೋಭಿಸುತ್ತಿದೆ, ಬಾಳ್ಗೆ ತನಿರಸದಿಂಪನೂಡಿ!
ತಟಿಯಾ ತಟಿದ್ದೀಪರಾಜಿ, ಪಡಿನೆಳಲಿನಲಿ,
ಕರಗಿಸಿದ ಚಿನ್ನದುರಿ ಬೆಂಕೆಯ ಸಲಾಕೆಗಳ
ಸಾಲ್ಗಳಂದದಿ ವಿರಾಜಿಸಿದೆ, ಕಣ್ದಿಟ್ಟಿಯನು
ಚಿಟೆಗೈದಾಕರ್ಷಿಸಿ. ನೋಡು: ಮಾರ್ಪೊಳಪಿನಲಿ,
ಉಷೆಯ ಹೆಣ್ಣಿನ ಕೆನ್ನೆಯರಿಸಿನಕೆ ಕುಂಕುಮಂ
ನೆರೆದುದೆನೆ, ಸೂರ್ಯಸಾರಥಿಯರುಣನೈತರುವ
ತೇರ್ಗಾಲಿಯಿಂದೇಳ್ವ ಕೆಂಧೂಳಿ, ಮೂಡಲಲಿ
ಶೋಭಿಸುತ್ತಿಹುದೆಂತು ತುಂಬಿಹುದು ದಟ್ಟಯಿಸಿ!

-ಆಃ
ಆಲಿಸದೊ, ನಾರಾಚವೇಗದಿಂ ಸುಯ್ಯೆಂದು
ಹಾರಿ ಬಂದಂಬುವಿಂಗೆರಗುತಿಹ ತಿಂತಿಣಿಯ
ಕೊಳರ್ವಕ್ಕಿಗಳ ರೆಕ್ಕೆಸದ್ದು! ಅದೊ ಗೂಬೆದನಿ!
ಅದೂ ಕೂಡ, ಸನ್ನಿವೇಶದ ಮಹಿಮೆಯೆಂಬಂತೆ,
ವಿಕೃತವಾಗಿಲ್ಲ! ಮತ್ತಾಲಿಸದೊ ತೇನೆಯುಲಿ!
ಮಡಿವಾಳನಿಂಚಿಳ್ಳು! ಮಾಗಿಯಾದರು ಕೂಡ,
ಕೇಳು ಕೂಗಿತದೊ ಕೋಗಿಲೆ! ಸಂಪ್ರದಾಯವನು
ಮುರಿದು ನಡೆವ ನವೀನ ಯುಗವಲ್ತೆ ಈ ಕಾಲ?....

ನೋಡುತಿಹ ನೋಟದೊಳೆ ಅದೊ ಆ ದಿಂಗತದೆಡೆ
ಪೂರ್ವದಿಕ್ಕುರಿಯುತಿದೆ! ಸ್ಥೂಲ ಜಡ ಜಗವೆಲ್ಲ
ಧ್ಯಾನದೃಷ್ಟಿಗೆ ಭಾವವಿನ್ಯಾಸದಂದದಲಿ
ವೇದ್ಯವಾಗುತಿದೆ: ಕವಿದರ್ಶನಕೆ ಜಡವಿಲ್ಲ;
ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ.
ರಸವಲ್ಲದಿನ್ನಿಲ್ಲ ವಿಶ್ವದಲಿ. ಮಾನವನ
ಮೇಣಿತರ ಜೀವಿಗಳ ಮನಕೆ ಮೇಣನುಭವಕೆ

ಕಲ್ಲಾಗಿ, ಮಣ್ಣಾಗಿ, ನೀರು ಗಾಳಿಗಳಾಗಿ,
ಬೆಳಕು ಬೆಂಕಿಗಳಾಗಿ, ನಭವಾಗಿ ಗಿರಿಯಾಗಿ

ಗ್ರಹ ತಾರೆ ಶಶಿ ಸೂರ್ಯ ನೀಹಾರಿಕೆಗಳಾಗಿ,
ಕಾಲದೇಶಗಳೊಂದು ಮುರಿಯಾಗಿ ನಿರಿಯಾಗಿ
ಹೊನಲಾಗಿ, ಹೊರಗಾಗಿ ತೋರುವೀ ವಿಶ್ವಕ್ಕೆ
ತಳಹದಿಯದೊಂದೆ ಚೈತನ್ಯ; ಅದು ರಸದೃಷ್ಟಿ
ಸಂವೇದ್ಯ; ರಸಋಷಿಯ ಪ್ರತಿಭಾ ಸಮಾಧಿಗದು
ಪ್ರತ್ಯಕ್ಷ. ಆ ರಸ ಸಮಾಧಿಯಲಿ ಲಯನಾಗಿ
ಕವಿ ಸಚ್ಚಿದಾನಂದ ಮಧುವಿನಾ ಮಡುವಿನಲಿ
ಮುಳುಗಿ ಕರಗುವನು, ಬಾಳೆಲ್ಲ ನಾಲಗೆಯಾಗೆ!

ಕಾವ್ಯರತಿ, ಸುಂದರಿಯೆ, ಪ್ರತಿಭಾ ತಪಸ್ವಿನಿಯೆ,
ವಿಶ್ವಸಂಮೋಹಿನಿಯೆ, ಶೃಂಗಾರ ಮಂದಿರೆಯೆ,
ನಿನ್ನ ಮಿಂಚಪ್ಪುಗೆಗೆ ಕಗ್ಗಲ್ಲು ರಸದ ಕಿಡಿ:
ಜಡವೆಲ್ಲ ಚೈತನ್ಯದಗ್ನಿ ನದಿ! ತವ ಕೃಪೆಗೆ
ಶರಣು ಕವಿದರ್ಶನಂ: ಹೇ ದೇವಭೋಗಿನಿಯೆ,
ನಿನ್ನ ಚುಂಬನರಸದ ಪಾನದಿ ಕವಿಯೆ ಯೋಗಿ!

೧೧-೧-೧೯೩೬

## ೩೧. ಮುಂಗಾರು

ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಗಿಗೆದರಿ,
ಮುಂಗಾರಸುರಿಯು ರಕ್ಕಸವಜ್ಜೆಗಳಿಕ್ಕುತ ಬಂದಳು ಬಲು ಗದರಿ!
ಗುಟುರನು ಹಾಕಿತು ಮುಂಗಾರ್ ಗೂಳಿ!
ಘೀಳಿಟ್ಟೊರಲಿತು ಘನಘಟೆಯಾಳಿ!
ಬುಸುಗುಟ್ಟಿತು, ಬೀಸಿತು ಬಿರುಗಾಳಿ!
ಸುತ್ತಲು ಮುತ್ತಿತು ಕಾರ್ಮೋಡ!
ಹರಿಯುವ ಹಾವಿನ ತೆರದಲಿ ಕತ್ತಲೆ ಮೆಲ್ಲನೆ ನುಂಗಿತು ಮಲೆನಾಡ!

ಹಿಂಜರಿದುರಿಬಿಸಿಲಂಜುತಲಡಗಿತು, ರವಿಮಂಡಲ ಕಣ್ಮರೆಯಾಯ್ತು;
ಕಾಳಿಯ ಕೇಶದ ತಿಮಿರವು ಮುಸುಗಿತು, ಶಾಂತಿಯು ಗಲಭೆಗೆ ಸೆರೆಯಾಯ್ತು.
ಕಾಳಿಯ ಕಂಗಳ ಕೆಂಬೆಳಕಂತೆ,
ಕೈ ಹೊಂಬಳೆಗಳ ಹೊಸ ಹೊಗರಂತೆ,
ಝಳಪಿಪ ಖಡ್ಗದ ದೀಧಿತಿಯಂತೆ,
ಮಿಂಚುಗಳೆಸೆದುವು ಗೊಂಚಲಲಿ!
ಹೊಳೆದುವು, ಅಳಿದುವು, ಸುಳಿಸುಳಿದಲೆದುವು ಮುತ್ತುವ ಮೋಡಗಳಂಚಿನಲಿ!

ಹಾಡುವ ಹಕ್ಕಿಯು ಹಣ್ಣಿನ ಮರದಿಂದೋಡುತ ಹುಲ್ಲಿನ ಹಕ್ಕೆಯಲಿ
ಚಿಲಿಪಿಲಿ ದನಿ ಮಾಡವ್ವನ ಕರೆಯುವ ಮರಿಗಳನಪ್ಪಿತು ತಕ್ಕೆಯಲಿ.
ಬೆಚ್ಚನೆ ರೆಕ್ಕೆಯೊಳವುಗಳನಿಟ್ಟು,
ಹಸಿದಿಹ ಮಕ್ಕಳಿಗುಣಿಸನು ಕೊಟ್ಟು,
ಗೂಡಿನ ಬಾಯಲಿ ಮಂಡೆಯನಿಟ್ಟು
ದಿಟ್ಟಿಯನಟ್ಟಿತು ಯೋಗಿಯೊಲು,
ಕೊಂಬೆಯ ತೊಟ್ಟಿಲ ತೂಗುತ ಗಾಳಿಯು ಬುಸುಬುಸುಗುಡುತಿರೆ ಭೋಗಿಯೊಲು!

ಬನದಲಿ ಬಯಲಲಿ ಮೇಯುವ ತುರುಗಳು ಜವದಲಿ ಕೊಟ್ಟಿಗೆಗೋಡಿದುವು;
ಬಾಲವನೆತ್ತಿದ ಕರುಗಳು “ಅಂಬಾ” ಎನ್ನುತ ತಾಯ್ಗಳ ಕೂಡಿದುವು.
ಗುಡುಗಿನ ಸದ್ದಿಗೆ ಕಾಡುಗಳದುರಿ,
ಅಡವಿಯ ಮಿಗಗಳು ಸಿಡಿಲಿಗೆ ಬೆದರಿ,
ಕಿತ್ತೆದ್ದೋಡುತ ಹಿಂಡನು ಚೆದರಿ
ಪೊದೆಗಳ ಗುಹೆಯನು ಸೇರಿದುವು.
ತೊಳಲುವ ಕರ್ಮುಗಿಲಾಲಿಯ ಕಲ್ಗಳ ಮಿರುಗುವ ಮಳೆಯನು ಕಾರಿದುವು!

ವನಪರಿವೃತ ಗಿರಿಶಿರದಿಂದೊಯ್ಯನೆ ಮರದಲೆದಳಿರನು ತುಳಿತುಳಿದು
ಚೆಲುವಿನ ಹನಿಗಳು, ಸುರಶಿಶುಮಣಿಗಳು, ಬುವಿಗಿಳಿತಂದನು ನಲಿನಲಿದು.
ಬಳಿ ಸಾರುವ ದೂರದ ಸರ ಕೇಳೆ,
ಗಣನೆಗೆ ಸಿಲುಕದ ಮಳೆಹನಿ ಬೀಳೆ,
ಕಬ್ಬಿಗನೆದೆಯಲಿ ಮುದ ಮೊಳೆತೇಳೆ
ನೆನೆವುದು ಸೊಗದಲಿ ಬಗೆಗಣ್ಣು:
ಧಾರೆಯ ದಾರದಿ ನೆಯ್ದಿಹ ತೆಳ್ಳನೆ ಜವನಿಕೆಯುಡುವಳು ತಿರೆವೆಣ್ಣು!

ಮುಗಿಲಿನ ಮುತ್ತುಗಳಾಲಿಯ ಕಲ್ಲುಗಳುದುರಲು ಹೂಮಳೆಯಂದದಲಿ
ಹುಡುಗರು ಹುಡುಗಿಯರಾಯ್ದಾಯ್ದವುಗಳ ಕುಣಿದು ತಿಂದರಾನಂದದಲಿ.

ಸಗ್ಗದ ಕಂಬನಿ ತಿರೆಯನು ತೊಯ್ಯೆ,
ಬೆಂದಿಹದುರಿಯನು ಪರ ಬಂದೊಯ್ಯೆ,
ಲೋಕಕೆ ನಾಕವು ಬಿಜಯಂಗೆಯ್ಯೆ
ಕಿಸಲಯ ಸುಮ ಸೋಪಾನದಲಿ,
ಕವಿ ಹೃದಯದಿ ಮೋಹನ ಸುರಗಾನದ ಮಳೆಗರೆವುದು ಸುಮ್ಮಾನದಲಿ!

೨೨-೪-೧೯೨೯

## ೩೧. ಒಂದು ಸಣ್ಣ ಹಕ್ಕಿಗೆ

“ನಿನಗೆ ನಾನು, ನನಗೆ ನೀನು,
ಸಣ್ಣ ಹಕ್ಕಿಯೆ;
ಹಾಡು, ಕೇಳಿ ನಲಿವೆ ನಾನು,
ಬಣ್ಣ ಚುಕ್ಕಿಯೆ.
ಕೇಳ್ದರೇನು ಬಿಟ್ಟರೇನು
ಉಳಿದ ಲೋಕವು?
ಉಲಿಯೆ ನೀನು, ನಲಿಯೆ ನಾನು,
ನಮಗೆ ನಾಕವು!”

ಆಗ ತಾನೆ ಮೂಡುತಿತ್ತು
ಪುಷ್ಯ ದಿನಮಣಿ.
ಕಟ್ಟುತಿದ್ದ ಮನೆಯ ಬಳಿ
ನೆಟ್ಟ ಬಿದಿರ ನೆತ್ತಿಯಲಿ
ಪುಟ್ಟದೊಂದು ಚಿಟ್ಟೆಹಕ್ಕ
(ಬಾನಿಗೆದುರು ಕರಿಯ ಚುಕ್ಕಿ!)
ನಲುಮೆ ಚೆಲುಮೆಯುಕ್ಕಿಯುಕ್ಕಿ
ತನ್ನ ಸುಖಕೆ ತಾನೆ ಮಿಕ್ಕಿ
ತನಗೆ ತಾನೆ ಹಾಡುತಿತ್ತು
ತನ್ನ ಮನದಣಿ!

ರಸ್ತೆಯಲ್ಲಿ ನಡೆವ ಮಂದಿ
(ಮುತ್ತಿನೆದುರು ಮುಂದೆ ಹಂದಿ!)

ಹಾಳು ಹರಟೆಹೊರೆಯ ಹೊತ್ತು
ಕೇಳದದನು ಸಾಗುತಿತ್ತು.
ಜನರು ಕೇಳಲಿಲ್ಲವೆಂದು
ನಾಣ್ಚಲಿಲ್ಲ, ಮುಳಿಯಲಿಲ್ಲ,
ನಿಲಿಸಲಿಲ್ಲ ತನ್ನ ಸೊಲ್ಲ;
ರವಿಗೆ ಗಾನದರ್ಘ್ಯವಿತ್ತು,
ಕವಿಗೆ ರಸದ ತೀರ್ಥವಿತ್ತು
ತನಗೆ ತಾನೆ ಹಾಡುತಿತ್ತು
ಹಕ್ಕಿ ಮನದಣಿ!

"ನಿನಗೆ ನಾನು ನನಗೆ ನೀನು....."
ಎಂದು ಹಾಡುತಿರಲು ನಾನು,
ಕೆಂಕಮಾಗಿ ಮೂಡು ಬಾನು
ಆಗತಾನೆ ಮೂಡುತಿತ್ತು
ಪುಷ್ಯ ದಿನಮಣಿ!

೬-೧-೧೯೩೭

## ೩೩. ಗಗನ ಗುರು

ಅನಂತದಿಂ,
ದಿಗಂತದಿಂ,
ಅನಂತತಾ ದಿಗಂತದಿಂ
ನೋಡೆ ನೋಡೆ ಮೂಡಿತೊಂದು
ಮೋಡ ಗೋಪುರ;
ಗಿರಿಯ ಬಿತ್ತರ;
ಶಿಖರದೆತ್ತರ;
ಅನುಭವಿಸುವ ರಸಋಷಿ ಮತಿಗತಿಮಹತ್ತರ!

ಭಾದ್ರಪದದ ಬಾನಿನಲ್ಲಿ
ನೀಲ ಪಟದ ಭಿತ್ತಿಯಲ್ಲಿ
ಸಂಜೆ ರವಿಯ ಚಿನ್ನ ಛವಿಯ ಕಲೆಯ ಕುಂಚಿಕೆ

ಸ್ವಲ್ಪದಲ್ಲಿ ಕಲ್ಪಗಳನೆ
ಕಲ್ಪಿಸುತ್ತ ಚಿತ್ರಿಸಿತೆನೆ
ಪ್ರಕಟವಾಯ್ತು ವರ್ಣಶಿಲ್ಪದೊಂದು ಮಹ ಸಂಚಿಕೆ!

ಸ್ತೂಪ ಸ್ತೂಪ ಸ್ತೂಪವೇರಿ
ಮೇಘದೇಗುಲ,
ವ್ಯೋಮಕೇಶ ಜಟಾಜೂಟ ಶೈಲಕೂಟ ಶೈಲಿಯೋಲ್,
ಬೃಹದ್ ಭೂಮ ಶೂಲದೋಲ್,
ಮನಃಕೋಶವನ್ನು ಮೀರಿ,
ಪ್ರಾಣಕೋಶವನ್ನು ತೂರಿ,
ಅಗಲ ಅಗಲ ಅಗಲವಾಗಿ
ಗಗನ ಗಗನ ಗಗನವಾಗಿ
ಬಿರಿದುದೆದೆಯ ಬಾಗಿಲಃ
ತಟಸ್ಥವಾಯ್ತು ಮಿಥ್ಯೆಯೊಂದನೃತ ವಿಮರ್ಶನ;
ಇಂದ್ರಿಯತೆಯ ದಾಂಟಿದಾತ್ಮಕಾಯ್ತುತೀತ ದರ್ಶನ!

ರಸಾನಂದ ತನ್ಮಯತೆಗೆ ಕಾಲವುಂಟೆ?
ಕಾಮರೂಪಿಯಾಗಿ ಬಂದು
ಕ್ಷಣಕ್ಷಣಕ್ಷಣಕ್ಕೊಂದು
ಪುನರ್ಜನ್ಮವಾಗಿ ನಿಂದು
ಕಣ್ಣ ಮುಂದೆ ವಿರಚಿತಂ,
ನವೋ ನವೋ ಪರಿಚಿತಂ,
ವಿಯದ್ದಿವ್ಯ ಕವಿಯ ಕಾವ್ಯರಸವನೀಂಟೆ
ಘಂಟೆ ಘಂಟೆ ಘಂಟೆ ಘಂಟೆ
ಕಳೆದೆನೆಂಬ ಮಾತಿಗೇನು ಅರ್ಥವುಂಟೆ?

ಮಾತಿಗೊಂದು ಅರ್ಥವೇಕೆ
ಅರ್ಥವಿದ್ದರರ್ಥ ಸಾಕೆ?
ಮೋಡಗಳನು ನೋಡಿ ಕಲಿ;
ಅರ್ಥ ಅಲ್ಪ ಎಂದು ತಿಳಿ!
ಮಾತು ಅರ್ಥ ಎರಡೂ ವ್ಯರ್ಥ ಸ್ವ-ಅರ್ಥವಿರದಿರೆ!
ನೋಡುತಿರೆಯಿರೆ,
ದೂರವಾಗುತರ್ಥ ಗಿರ್ಥವೆಂಬ ವ್ಯಾಧಿಗೆ

ಸಯ್ತೆನಾಂ ಸಮಾಧಿಗೆ:
ತಟಿಚ್ಚರಣದಗ್ನಿಹಂಸಕೃಪಾಂಭೋಧಿಗೆ!

೧೮-೯-೧೯೪೧

## ೩೪. ಸಂಧ್ಯಾಯಕ್ಷಿಣಿ

ಸಂಧ್ಯಾಶಿಲ್ಪಿಯ ಸುವರ್ಣಯಕ್ಷಣಿ
ಮೇಘ ಲೋಕಕೆ ಓಕುಳಿಯೆರಚಿದೆ
ವಿಧವಿಧರೂಪದ ವಿಧವಿಧ ವರ್ಣದ
ಚಿತ್ರರಥೋತ್ಸವಕೆ.
ಚಿಂತಾತೀತಂ ಭಾಷಾತೀತಂ
ಬುದ್ಧಿಗಸಾಧ್ಯಂ ಹೃತ್‌ಸಂವೇದ್ಯಂ
ಭಾವ ತರಂಗಗಳೇಳುತಿವೆ,
ವಿವಿಧಾಕಾರವ ತಾಳುತಿವೆ,
ಗಗನ ಮಹಾಮನದಿ!
ನಿಶ್ಚಳ ಪಕ್ಷ್ಮಂ ನಿಶ್ಚಳ ತಾರಂ
ನಿಷ್ಪಂದಿತ ತನು ತಾನ್,
ಕಾಯ್ದಾ ಕಬ್ಬುನ ನೀರಾಗುವವೋಲ್
ಹೊಮ್ಮಿದ ಗಾನಂ ದೂರಾಗುವವೋಲ್,
ಭಾವಸಮಾಧಿಯಿನಂತಸ್ಸಾರನ್
ಧ್ಯಾನಪ್ರಲಯಿತ ಕವಿ ತಾನಾದನ್
ಬೈಗಿನ ಬಾನ್!

೨೨-೧೧-೧೯೪೧

# ೩೫. ಹಿಮಮಣಿ

ಸ್ವರ್ಗವನು ಬೇಟೆಯಾಡಲು ಹೊರಟೆ ಹೊತ್ತಾರೆ
ಹಸಿದ ಹೆಬ್ಬುಲಿಯಂತೆ, ಸೌಂದರ್ಯಧೇನುವಾ
ಎದೆಯ ನೆತ್ತರ ಹೀರುವಾತುರದಿ, ಹಸುರಿಡಿದ
ಮಲೆಯ ಕಣಿವೆಯ ಹೊದರು ಹುಲ್ಲಿನ ಬಯಲಿನಲ್ಲಿ!
ಹೋದಿರುಳು ಮಳೆಹೊಯ್ದು ತೊಪ್ಪನೆಯೆ ತೊಯ್ದ ತಿರೆ
ಭಾದ್ರಪದ ಮಾಸದಾ ಪ್ರಾತಃಸಮಯ ಸೂರ್ಯ
ಸುಂದರ ಮರೀಚಿಯಲಿ ಮಿಂದು, ತೃಣಗಣ ಶಿರದಿ
ಕುಣಿ ಕುಣಿವ ಹಿಮಮಣಿಯ ಸಾಸಿರ ಸೊಡರ್ಗಳಿಂ
ರಮಣೀಯವಾಗಿತ್ತು, ಹುಡಿಮಾಡಿ ಕಿಡಿಯಿಟ್ಟು
ಮಳೆಬಿಲ್ಲನವನಿಯೊಳೆರಚಿದಂತೆ! ಕಿಕ್ಕಿರಿದು
ಹಕ್ಕಿಯಿಂಚರವಿಳೆಯನಾಗಸಕೆ ಬೆಸೆದಿತ್ತು!
ತೇಲಿ ಕಬ್ಬಿಗನಾತ್ಮವಾನಂದ ವಾರ್ಧಿಯಲಿ
ಮುಳುಗಿ ಕರಗಿತತ್ತು! ಸಂಪೂರ್ಣತೆಯ ಸಂತೃಪ್ತಿ
ಜೀವ ಜಿಹ್ವೆಯ ಮೇಲೆ ಹೆಜ್ಜೇನ ಹೊಯ್ದಿತ್ತು!

ನಿಲ್ಲಿಲ್ಲಿ! ದಮ್ಮಯ್ಯ, ನಿಲ್ಲಿಲ್ಲಿ! ಕಾಲವೂ
ದೇಶವೂ ಸಂಧಿಸುವ “ಈಗಿಲ್ಲಿ!”-ಸ್ವರ್ಗವೈ
ಈ ಸ್ಥಳ-ಯಮುನೆಯನೀ ಕ್ಷಣ-ಗಂಗೆ ಸಂಗಮಿಸೆ
‘ಈಗಿಲ್ಲಿ’!-ನಿಂತಿಲ್ಲಿ ನಿಂತೀಗ ನೋಡಲ್ಲಿ:
ಹಸುರುಕ್ಕಿ ಹರಿಯುವಾ ಹುಲ್ಲೆಸಳ ಮುಡಿಯ ತುದಿ
ಮಣಿದೀಪವೆನೆ ಉರಿವ ಉಜ್ಜ್ವಲ ಹಿಮದ ಬಿಂದು!
ಸೌಂದರ್ಯದೇವತೆಯ ಮೂಗುತಿಯ ಹನಿಮುತ್ತು
ನೇಲುತಿದೆ, ಜೋಲುತಿದೆ, ಮಿರುಮಿರುಗುತಿದೆ ನೋಡು!
ಹೆಜ್ಜೆ ಮುಂದಿಡೆ ಸೊನ್ನೆ; ಹೆಜ್ಜೆ ಹಿಂದಿಡೆ ಸೊನ್ನೆ;
ಚಣ ಮುಂಚಿದರೆ ಸೊನ್ನೆ; ಚಣ ಹಿಂಚಿದರೆ ಸೊನ್ನೆ;
ಕಾಲ ದೇಶ ಪ್ರಯಾಗಕ್ಷೇತ್ರದೀಗಿಲ್ಲಿ
ಮೀಯದಿರೆ ದೊರಕದೈ ಹಿಮಮಣಿ ತಿಲೋತ್ತಮೆಯ
ಸಗ್ಗಸಿರಿ. ತಿರೆಯೊಳಿಹ ಚೆಲುವೆಯರ ಚೆಲುವೆಲ್ಲ
ಸೇರಿ ಮೈವೆತ್ತೊಡಂ ಹಿಮಮಣಿ ತಿಲೋತ್ತಮೆಯ ಮುಂದೆ.....

ಪೋ, ಸಾಕು ಬಣ್ಣನೆಮಾತು; ಹೋಲಿಕೆಯ
ಕಣ್ಣು ಕುರುಡಾದೀತು! ನಿಂತು ಸುಮ್ಮನೆ ನೋಡಿ
ಮೆಯ್ಯ ಮರೆ, ಆಲೋಚನೆಯನತ್ತಕಡೆ ತಳ್ಳಿ!

೫-೯-೧೯೩೫

## ೩೬. ಹೂವು-ಚಿಟ್ಟೆ

ಮಾಗಿಯ ಪ್ರಾತಃಕಾಲದ ಬಿಸಿಲಲಿ
ಲೋಕವೆ ಚಳಿ ಕಾಯಿಸುತಿತ್ತು.
ಕಾಮನ ಬಿಲ್ಲಿನ ಕಣ್ಗರಿ ನವಿಲೆನೆ
ಹೂವಿನ ಕೊಪ್ಪಲು ಕುಣಿದಿತ್ತು.
ನೀಲಿಯ ಕನಸಿನ ಮುಗಿಲನು ಹೋಲಿ
ಹೋದೆನು ನಾನಾಲಸ್ಯದಿ ತೇಲಿ.ಸ

ಮೆಲ್ಲಲರಾಟಕೆ ತಲೆಯೊಲೆದಿದ್ದ
ಜಿನಿಯಾ ಹೂವಿನ ತುದಿಯಲ್ಲಿ
ಕರಿಮೈ ಬಿಳಿರೆಕ್ಕೆಯ ಕೆಂಬೊಟ್ಟಿನ
ಚೆಲ್ವಿನ ಚಿಟ್ಟೆಯ ಕಂಡಲ್ಲಿ
ತಲ್ಲೀನತೆಯೊಳೆ ಚಲಿಸದೆ ನಿಂತೆ,
ಬಾಳಲರಂಚಲಿ ಹೊಂಬನಿಯಂತೆ!

ಅಹಹಾ ನಿಂತಿರೆ ದೃಷ್ಟಿಜಿಹ್ವೆಯೊಳೆ
ದೃಶ್ಯದ ಮಧುರಸವನು ಹೀರಿ,
ಬಾಳಿನ ಹೂವಿನ ಜೇನನು ನನ್ನೆದೆ
ನಲಿದೀಂಟಿತು ಚಿಟ್ಟೆಯ ಸೇರಿ:
ದರ್ಶನವೊಂದಿರೆ ಸಗ್ಗಕೆ ಬಟ್ಟೆ
ಹೂವಿನ ತುಟಿಯನು ಚುಂಬಿಪ ಚಿಟ್ಟೆ!

೮-೧-೧೯೩೬

## ೩೭. ಒಂದು ಹೂವಿಗೆ

ಅನಂತ ಕಾಲವು ನಿನ್ನನು ಹೊತ್ತಿದೆ;
ಸಮಸ್ತ ವಿಶ್ವವೆ ನಿನ್ನನು ಹೆತ್ತಿದೆ.
ನನಗೆಂತುಟೊ ನಿನಗಂತುಟೆ ಸೃಷ್ಟಿ;
ನನ್ನಂತೆಯೆ ನಿನಗೂ ಇದೆ ದೃಷ್ಟಿ;
ನನ್ನಂತೆಯೆ ಅನುಭವಿಸುವ ಶಕ್ತಿ;
ನನ್ನಂತೆಯೆ ನೀನೂ ವ್ಯಕ್ತಿ!

೧೦-೧೧-೧೯೩೩

## ೩೮. ಹಾಡಿದನು ಗಮಕಿ*

ಹಾಡಿದನು ಗಮಕಿ;
ನಾಡು ನಲಿದುದು ರಸದ ಕಡಲಿನಲಿ ದುಮುಕಿ:
ಆ ಅರಣ್ಯಾಕಾಶಗಳ ಬೃಹನ್ಮೌನದಲಿ,
ಕತ್ತಲಲಲಿ ಕನಸಾದ ವಿಸ್ತೀರ್ಣಧಾತ್ರಿಯಲಿ,
ಚೈತ್ರ ರಾತ್ರಿಯಲಿ,
ಮಸಗಿ ತೆರೆತೆರೆಯಾಗುತುಬ್ಬಿ
ಹಸರಿ ನೊರೆನೊರೆಯುಕ್ಕಿ ಹಬ್ಬಿ
ತೀರವನ್ನಪ್ಪಳಿಸಿ ಕೊಬ್ಬಿ
ಭೋರಿಡುವ ವಾರಿಧಿಯ ಘನಘೋಷದಂದದಲಿ ತಿರೆಯ ತಬ್ಬಿ
ಮೊಳಗಿ ಬರೆ ಕವಿ ಕುಮಾರವ್ಯಾಸನಾವೇಶವಾಣಿ
ರೋಮಾಂಚನದಿ ವಿಕಂಪಿಸಿತು ಸಹ್ಯಾದ್ರಿಶ್ರೇಣಿ!

---

* ಗಮಕಿವರ್ಯ ಶ್ರೀ ಕೆ. ಕೃಷ್ಣರಾಯರು ಮಲೆನಾಡಿನಲ್ಲಿ ಭಾರತವಾಚನ ಮಾಡಿದ ಒಂದು ಸಂದರ್ಭದಲ್ಲಿ.

# ೩೯. ವರ್ಷ ಭೈರವ

ಕದ್ದಿಂಗಳು; ಕಗ್ಗತ್ತಲು;
ಕಾರ್ಗಾಲದ ರಾತ್ರಿ.
ಸಿಡಿಲ್ಮಿಂಚಿಗೆ ನಡುಗುತ್ತಿದೆ
ಪರ್ವತ ವನಧಾತ್ರಿ.
ತುದಿಯಿಲ್ಲದೆ ಮೊದಲಿಲ್ಲದೆ
ಹಿಡಿದಂಬರವನು ತಬ್ಬಿದೆ
ಕಾದಂಬಿನಿ ರಾಶಿ;
ನಿರ್ದಯ ಕಠಿನಾಘಾತದಿ
ಕುಂಭಿನಿಯನು ಅಪ್ಪಳಿಸಿದೆ
ಘೀಳಿಟ್ಟುರೆ ಭೋರೆನ್ನುತೆ
ಬಿರುಗಾಳಿಯು ಬೀಸಿ!

ಹೊಂಬಳ್ಳಿಯು ಹೊಮ್ಮಿದವೊಲು
ಥಳ್ಳನೆ ಮುಗಿಲಂಚು,
ಇರುಳಲಿ ಹಗಲಿಣಿಕಿದವೊಲು
ಹಾವ್ನಾಲಗೆ ಮಿಂಚು
ನೆಕ್ಕುತಲಿದೆ ಕತ್ತಲೆಯನು;
ಕುಕ್ಕುತಲಿದೆ ಬುವಿಗಣ್ಣನು
ಮಿಂಚ್ಹಕ್ಕಿಯ ಚಂಚು!
ಆಕಾಶವೆ ನೀರಾಯ್ತೆನೆ
ಸುರಿಯುತ್ತಿದೆ ಭೋರ್ಭೋರೆನೆ
ಮುಂಗಾರ್ಮಳೆ ಧಾರೆ;
ಲಯ ಭೀಷಣ ಮಳೆಭೈರವ
ಮೈದೋರಲು ಮರೆಯಾಗಿವೆ
ಭಯದಲಿ ಶಶಿತಾರೆ!

ಲಯ ರುದ್ರನ ಜಯ ಡಿಂಡಿಮ
ಘನ ವಜ್ರದ ರಾವ;
ಭವ ವಿಪ್ಲವಕರ ಭೈರವ
ವರ ತಾಂಡವ ಭಾವ!

ದಿಗ್ದಿಕ್ಕಿಗೆ ಅದೊ ಹೊಕ್ಕಿದೆ
ಕಾರ್ಮುಗಿಲಿನ ಕೇಶ!
ಸಿಡಿಲ್ಮಿಂಚಲಿ ಹೊಮ್ಮುತ್ತಿದೆ
ಮಳೆ ಭೈರವ ರೋಷ!
ಮಳೆ ಎಂಬುದು ಬರಿ ಸುಳ್ಳಿದು!
ಮಳೆಯಲ್ಲಿದು! ಮಳೆಯಲ್ಲಿದು!
ಪ್ರಲಯದ ಆವೇಶ!

೨೬-೧-೧೯೩೪

## ೪೦. ಹೀರೆಯ ಹೂವು

ಮಾಡಲು ಏನೂ ಕೆಲಸವೆ ಇಲ್ಲ;
ಓದಲು ಮನಸಿಲ್ಲ.
ಆಡುವೆನೆಂದರೆ ವಾಸುವು ಇಲ್ಲ;
ಹಾಡಲು ರಮೆಯಿಲ್ಲ
ಕವಿತೆಯ ರಚಿಸಲು ಭಾವವೆ ಇಲ್ಲ;
ಸುಮ್ಮನೆ ಇರಲೂ ಆಗುವುದಿಲ್ಲ;

ಅಂಗಳದಲ್ಲಿಹ ಹೀರೆಯ ಹೂವೇ,
ನಿನ್ನನೆ ನೋಡುವೆನು;
ಹಳದಿಯನುಟ್ಟಿಹ ನಿನ್ನನು ಕುರಿತೇ
ಗೀತೆಯ ಹಾಡುವೆನು!
ಏನೆಂದುಲಿಯಲಿ, ಹೂವೇ, ಹೇಳು?
ಬಾಯಿಗೆ ಬಂದುದ ಹಾಡುವೆ ಕೇಳು!

ಯಾರೊಲಿದಂದಕೆ, ಯಾರ ವಿಲಾಸಕೆ
ನಿನ್ನನು ಹೋಲಿಸಲಿ?
ಯಾವಾನಂದದ ಹರಿಯುವ ಹೊಳೆಯೊಳು
ನಿನ್ನನು ತೇಲಿಸಲಿ?
ಒಲವಿನ ಹೂವೇ! ಗೆಲುವಿನ ಹೂವೇ!
ಚೆಲುವಿನ ಹೂವೇ! ಹೀರೆಯ ಹೂವೇ!

ತಾರೆಗೆ ನಿನ್ನನು ಹೋಲಿಸಲಾರೆ,
ನಿನಗದು ಅಪಮಾನ;
ಹೂವಾಗಿಹ ಮಿಂಚಿನ ಹುಳುವೆಂದರೆ
ನಿನಗದು ದುಮ್ಮಾನ;
ಮೈದೋರಿಹ ಸೌಂದರವೆನಲೊಲ್ಲೆ;
ನಿನ್ನೀ ಬೆಡಗಿಗೆ ಇರುವುದೆ ಎಲ್ಲೆ?

ನೀನಪ್ಸರ ಕನ್ನಿಕೆಯೆನಲಾರೆ,
ನಗುವನು ವಿಜ್ಞಾನಿ;
ಚೇತನವಿಲ್ಲದ ಜಡಹೂವೆನೆ ನಾನ್
ಆಗುವೆನಜ್ಞಾನಿ!
ದೇವತೆಯೆನೆ ನಾನತ್ಯಭಿಮಾನಿ!
ಹೀರೆಯ ಹೂವೆನೆ ಕವಿತೆಗೆ ಹಾನಿ!

ಕಾಮನಬಿಲ್ಲಿನ ಮಗಳೆನಲೇನು,
ಹೇಳೈ, ಎಲೆ ಹೂವೇ?
ಪ್ರೇಮದ ಬಳ್ಳಿಯ ಮುಗುಳೆನಲೇನು,
ನಲಿದೊಲೆಯುವ ಹೂವೇ?
ಹೋಲಿಸಲೆಳಸುವುದೇತಕೆ ನಾನು?
ಅನುಪಮವಾಗಿಹೆ ಕುಸುಮವೆ ನೀನು!

ತಿರೆಗಿಳಿದರಳುವ ಮಿಂಚಿನ ಹನಿಯೆನೆ
ಅದು ನಿನಗತಿಮಾನಂ
ಕವಿತಾವೇಶದ ಜೋತಿಯ ಕಿಡಿಯೆನೆ
ನಿನಗದು ಬಹುಮಾನ!
ಹೋಲಿಸಲೇನೂ ತೋರುವುದಿಲ್ಲ!
ಹೀರೆಯ ಹೂವದು ಬೇರೆಯದಲ್ಲ!

ದೇವರ ಪೂಜೆಗೆ ಕೊಯ್ಯರು ನಿನ್ನ,
ಲಾಭದಪೇಕ್ಷೆಯಲಿ;
ನಿನಗಿಹ ಮಹಿಮೆಯನರಿಯಲು, ಹೂವೇ,
ಲೋಭದುಪೇಕ್ಷೆಯಲಿ!
ಬೆಡಗನು ಬಿಸುಡುವೆ ಗರ್ವವ ನೀಗಿ,
ಕಾಯಾಗುವೆ ಧರ್ಮಕೆ ಶರಣಾಗಿ!

ಹೀರೆಯ ಹೂವೆಂದೊಲಿಯರು ನಿನ್ನ,
ಮುಡಿಯರು ರಮಣಿಯರು;
ರಸಭಾವಗಳೊಂದಿಲ್ಲದೆ ಗಣಗಳ
ಹೊಸೆಯುವ ಕವಿಗಣವು
ನೇಯದು ಪದವೊಂದನು ನಿನಗಾಗಿ,
ಕುವಲಯ ಕಮಲಗಳಾಳಿಯ ನೀಗಿ!

ಸವೆಯಲು ಸೌಂದರ ಮೈಮೆಗಳೆಲ್ಲಾ
ಲೋಭಿಗಳೊಲಿಯುವರು;
ಹೃದಯದ ಸಂತಸವಿಳಿಯಲು ಉದರಕೆ,
ಹೂವೇ, ನಲಿಯುವರು!
ಅವರಾದರ್ಶವು ಬರಿಯುಪಯೋಗ!
ಹೊಟ್ಟೆಯ ಭೋಗವೆ ಅವರಿಗೆ ಭೋಗ!

ಮಾಡಲು ಕೆಲಸವು ದೊರಕುವವರೆಗೂ
ನಿನ್ನನೆ ನೋಡುವೆನು!
ಆಡಲು ವಾಸುವು ಬರುವಾವರೆಗೂ
ನಿನ್ನೊಡನಾಡುವೆನು!
ಭಾವವು ನೀನೆಂದುಲಿಯುವೆ, ಹೂವೇ,
ನೀನೇ ರಮೆಯೆಂದೊಲಿಯುವೆ, ಹೂವೇ!

## ೪೦. ಕುವೆಂಪು ಅವರ ಪಕ್ಷಿಕಾಶಿ: ಕೆಲವು ಮಾತುಗಳು

‘ಪಂಪನಿಂದ ಕುವೆಂಪುವಿನತನಕ’ ಎನ್ನುವುದು ಸಾವಿರ ವರ್ಷದ ಸಾಹಿತ್ಯದ ನೆನಕೆಯ ಸಂದರ್ಭದ ಒಂದು ನಾಣ್ಣುಡಿಯಾಗಿದೆ. ಇದು ಕೇವಲ ಚಮತ್ಕಾರದ ಮಾತಲ್ಲ ಎಂದು, ಈ ಮಾತನ್ನು ಯೋಚಿಸಿದಾಗೆಲ್ಲ ಅನ್ನಿಸತೊಡಗಿದೆ, ಯಾಕೆಂದರೆ ಪಂಪನಿಗೂ ಕುವೆಂಪುವಿಗೂ ಸಾಕಷ್ಟು ಸಾಮ್ಯಗಳಿವೆ:

ಹತ್ತನೆಯ ಶತಮಾನಕ್ಕೆ ಪಂಪ ಹೇಗೆ ಪ್ರತಿನಿಧಿಯಾಗಿದ್ದಾನೋ, ಹಾಗೆಯೆ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಪ್ರತಿನಿಧಿ ಕುವೆಂಪು.

ಪಂಪನಿಗಿದ್ದಂಥ ಆತ್ಮಪ್ರತ್ಯಯ ಮೂಲವಾದ ಧೀರ ವ್ಯಕ್ತಿತ್ವ ಕುವೆಂಪು ಅವರಿಗಿದೆ. ಪಂಪ ಆದಿಪುರಾಣ ಬರೆಯುವಾಗ ಹೇಳಿದ ಮಾತು ‘ಪೆರರೀವುದೇಂ, ಪೆರರಿಂದವಪ್ಪುದೇಂ’-ಎನ್ನುವುದಕ್ಕೆ ಸಂವಾದಿಯಾಗಿದೆ ‘ದಿವ್ಯ ನಿರ್ಲಕ್ಷ್ಯತೆಯ

ವರಕವಿಯ ಪಂಥ' ಎಂಬ ಕುವೆಂಪು ಅವರ ಮಾತು. ಪಂಪ ತನ್ನ ಮಿತ್ರನಾದ ಅರಿಕೇಸರಿಯ ಸ್ನೇಹದಿಂದ ಬದ್ಧನಾಗಿದ್ದೊಂದನ್ನು ಬಿಟ್ಟರೆ, ಉಳಿದಂತೆ ಅವನಿಗೆ, ರಾಜರನ್ನು ಕುರಿತು ತಿರಸ್ಕಾರವೇ ತುಂಬಿದೆ. ಪಂಪನಿಗೆ ಧರ್ಮಶ್ರದ್ಧೆಯ ನಿಲುವಿನಲ್ಲಿ ರಾಜಾಧಿರಾಜರ ಆಶ್ರಯ-ವೈಭವಗಳ ಬಗ್ಗೆ ಯಾವ ತಿರಸ್ಕಾರ ಕಾಣಿಸಿಕೊಂಡಿತೋ ಅದೇ ತಿರಸ್ಕಾರವನ್ನು ಕುವೆಂಪು ಅವರು ಸೌಂದರ್ಯ ಶ್ರದ್ಧೆಯ ನಿಲುವಿನಲ್ಲಿ ಪ್ರಕಟಿಸುತ್ತಾರೆ. ಒಂದು ಬೆಳಗು ಮಿರುಗುವ ಇಬ್ಬನಿಗಳನ್ನು ಕಂಡು-

**ಇದರ ಮುಂದೆ ಅರಸನ ಸಿರಿಯೆ?**
**ಕಬ್ಬಿಗನ ಕಾಲ್ಗಳಡಿ ಚಕ್ರವರ್ತಿಯ ವಿಪುಲ ಸಂಪತ್ತು**

ಎನ್ನುತ್ತಾರೆ, ಪಕ್ಷಿಕಾಶಿಯ ಕವಿತೆಯೊಂದರಲ್ಲಿ.

ಪಂಪ ನಿಸರ್ಗದ ಸೊಗಸನ್ನು ಅದರ ಅನೇಕ ವೈವಿಧ್ಯತೆಗಳೊಂದಿಗೆ ಅನುಭವಿಸಿ ವರ್ಣಿಸಿದಂತೆ, ಕುವೆಂಪು ಅವರು, ಪಂಪನಿಗೂ ಮಿಗಿಲಾದ ರೀತಿಯಲ್ಲಿ,ತಮ್ಮ ನಿಸರ್ಗ ಪ್ರೀತಿಯನ್ನು ಪ್ರಕಟಿಸಿಕೊಂಡಿದ್ದಾರೆ. ಪಂಪನಿಗಿದ್ದಂಥ ಗಾಢವಾದ ಜೀವನ ಶ್ರದ್ಧೆ ಕುವೆಂಪು ಅವರಲ್ಲಿದೆ.

ಪಂಪ, ತನ್ನ ಕಾವ್ಯಪ್ರಜ್ಞೆಯನ್ನು 'ಲೌಕಿಕ'-'ಆಗಮಿಕ'-ಎಂದು ಇಬ್ಭಾಗಿಸಿಕೊಂಡ. ಅದಕ್ಕೆ ಕಾರಣ ಒಂದೆಡೆ ತನ್ನ ಮಿತ್ರನಾದ, ದೊರೆಯಾದ ಅರಿಕೇಸರಿಯ ಮೇಲೆ ಇದ್ದ ಪ್ರೀತಿ; ಮತ್ತೊಂದೆಡೆ ಇದೆಲ್ಲಕ್ಕೂ ಮಿಗಿಲಾದ ತಾನು ಒಪ್ಪಿಕೊಂಡ ಜೈನಧರ್ಮದ ಬಗ್ಗೆ ಇದ್ದ ಶ್ರದ್ಧೆ. ಆದರೆ ಕುವೆಂಪು ಅವರ ಕಾವ್ಯಪ್ರಜ್ಞೆ ಕೂಡಾ ಇಬ್ಭಾಗವಾದಂತೆ ನಮಗೆ ತೋರುತ್ತದೆ ಅವರ ಕಾವ್ಯಗಳನ್ನೂ, ಕಾದಂಬರಿಗಳನ್ನೂ ಪಕ್ಕ ಪಕ್ಕದಲ್ಲಿರಿಸಿಕೊಂಡು ನೋಡಿದರೆ. ಅವರ ಕವಿತೆಗಳನ್ನು ನೋಡಿದರೆ, ಅವು ಕೇವಲ ನಿಸರ್ಗಾನುಭೂತಿಗೆ ಮೀಸಲಾಗಿ, ಅವರ ಕಾದಂಬರಿಗಳು ಅವರ ಸಾಮಾಜಿಕ ಪ್ರಜ್ಞೆಗೆ ಗಣಿಯಾಗಿ-ಇರುವುದನ್ನು ಕಂಡಾಗ, ಇವರು 'ಬೆಳಗುವಿನಲ್ಲಿ-ಎಂದರೆ ಕಾವ್ಯಗಳಲ್ಲಿ-ನಿಸರ್ಗಮಂ, ಅಲ್ಲಿ, ಕಾದಂಬರಿಗಳಲ್ಲಿ-ಜನಜೀವನಮಂ'-ಎಂದು ಹೇಳುವಂತೆ ಭಾಸವಾಗುತ್ತದೆ.

ಶೈಲಿಯ ಗಾಂಭೀರ್ಯ, ವಿದ್ವತ್ತಿನ ಹಿನ್ನೆಲೆಯಲ್ಲಿ ಕೂಡಾ ಕುವೆಂಪು ಪಂಪನನ್ನು ನೆನಪಿಗೆ ತರುತ್ತಾರೆ.

ಪಂಪನನ್ನು ಬಿಟ್ಟರೆ ಕುವೆಂಪು ಅವರಲ್ಲಿ ನಮಗೆ ಹೋಲಿಕೆಗೆ ಕಾಣುವ ಇನ್ನಿಬ್ಬರು ಕವಿಗಳು ಪಶ್ಚಿಮದವರು. ಒಬ್ಬ ಮಿಲ್ಟನ್ ಮತ್ತೊಬ್ಬ ವರ್ಡ್ಸ್‌ವರ್ತ್. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಅನ್ನು ಅದರ 'ರೂಪಾಂಶ'ದಲ್ಲಿ ಭಾಷೆಯ ಬಳಕೆಯಲ್ಲಿ ನೆನಪಿಗೆ ತರುತ್ತದೆ ಅವರ 'ರಾಮಾಯಣ ದರ್ಶನ'. ಮಿಲ್ಟನ್ ಮಹಾಕಾವ್ಯದಂತೆಯೇ, ಏಕ ಕವಿಕೃತವಾದ, ವಿದ್ವತ್‌ಪೂರ್ಣವಾದ, ಮಹಾಶೈಲಿಯ ಕೃತಿ 'ರಾಮಾಯಣ ದರ್ಶನ'. ವರ್ಡ್ಸ್‌ವರ್ತ್‌ನ ನಿಸರ್ಗಪ್ರಿಯತೆ, ಏಕಾಂತತೆ, ವ್ಯಕ್ತಿನಿಷ್ಠತೆಗಳನ್ನು ನೆನಪಿಗೆ ತರುತ್ತವೆ ಕುವೆಂಪು ಅವರ ಅನೇಕ ಪ್ರಕೃತಿ ಗೀತೆಗಳು.

ಒಟ್ಟಿನಲ್ಲಿ ಕುವೆಂಪು ಅವರಲ್ಲಿ, ಪಂಪನಿಂದ ಇಂದಿನ ತನಕ ಹರಿದುಬಂದ ಕನ್ನಡ ಕಾವ್ಯ ಪರಂಪರೆಯ, ಅಧ್ಯಯನದಿಂದ ಮೈಗೂಡಿಸಿಕೊಂಡ ಪಾಶ್ಚಾತ್ಯ ಸಾಹಿತ್ಯ ಪರಂಪರೆಯ, ಹಾಗೂ ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯ-ಅಂಶಗಳನ್ನು ಅವರ ಕವಿವ್ಯಕ್ತಿತ್ವದ ಮೂಲದ್ರವ್ಯಗಳೆಂದು ಗುರುತಿಸಬಹುದು.

ಕುವೆಂಪು ಅವರು ಪಾಶ್ಚಾತ್ಯ ಸಾಹಿತ್ಯಕ್ಕೆ ಒಂದು ಸವಾಲು: ಅಲ್ಲಿನ ಸಮಸ್ತ ಕಾವ್ಯ ಪ್ರಕಾರ (form)ಗಳನ್ನು ಕನ್ನಡಕ್ಕೆ ತಂದವರು ಇವರು. ಆಧುನಿಕ ಸಾಹಿತಿಗಳಲ್ಲಿ ಇವರಷ್ಟು ವೈವಿಧ್ಯತೆಗಳನ್ನು, ವ್ಯಾಪಕತೆಯನ್ನು ಕನ್ನಡ ಸಾಹಿತ್ಯಕ್ಕೆ ತಂದುಕೊಟ್ಟವರೂ ಯಾರೂ ಇಲ್ಲ. ಆದುದರಿಂದ ಕುವೆಂಪು ಅವರ ಕೃತಿಗಳನ್ನು ಅಧ್ಯಯನ ಮಾಡದೆ ಹೋದರೆ ಯಾವ ನಿಷ್ಠಾವಂತ ಓದುಗನ ಸಾಹಿತ್ಯಾಭ್ಯಾಸವೂ ಅಪೂರ್ಣವಾಗುವುದು ಖಂಡಿತ.

ಕುವೆಂಪು ಅವರ ಭಾವಗೀತೆ, ನಾಟಕ, ಖಂಡಕಾವ್ಯ, ಮಹಾಕಾವ್ಯ, ಕಾದಂಬರಿ-ಎಲ್ಲದರಲ್ಲೂ ಎದ್ದು ಕಾಣುವ ಒಂದು ಅಂಶವೆಂದರೆ ಅವರ ಪ್ರಕೃತಿಪ್ರೇಮ. ಅವರು ಹುಟ್ಟಿ ಬೆಳೆದ ಮಲೆನಾಡು, ಅದರ ಪರ್ವತಾರಣ್ಯ ರಮ್ಯತೆ ಸರ್ವವ್ಯಾಪಕವಾಗಿ ಕಾಣಿಸಿಕೊಂಡಿದೆ ಅವರ ಕೃತಿಗಳಲ್ಲಿ. ಅವರ ಭಾವಗೀತೆಯಲ್ಲಿ ವ್ಯಕ್ತವಾಗುವ ವ್ಯಕ್ತಿನಿಷ್ಠ ನಿಸರ್ಗಪ್ರಿಯತೆ ಹಾಗೂ ಹಸಿವು, ರಾಮಾಯಣ ದರ್ಶನದ ಶ್ರೀರಾಮನಲ್ಲಿ, ಅವರ ನಾಟಕಗಳ ಪಾತ್ರಗಳಾದ ಬುದ್ಧ, ಶ್ರೀರಾಮ, ಏಕಲವ್ಯರಲ್ಲಿ ಅದೇ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಅವರ ಮುಖ್ಯಪಾತ್ರಗಳೆಲ್ಲ ಗಿರಿವನಪ್ರಿಯರೇ. ರಾಮಾಯಣ ದರ್ಶನದಲ್ಲಿ-

**'ಮಲೆಯ ನಾಡೆನಗೆ ತಾಯಿಮನೆ; ಕಾಡು ದೇವರ ಬೀಡು,**
**ಗಿರಿಯ ಮುಡಿ ಶಿವನ ಗುಡಿ, ಬನವೆಣ್ಣೆ**
**ಮೊದಲಿನಾ ಮನದನ್ನೆ'**

ಎಂದು ತಮ್ಮ ನಿಸರ್ಗ ಪರವಾದ ಹಂಬಲವನ್ನು ತೋಡಿಕೊಂಡಿದ್ದಾರೆ. 'ಹೋಗುವೆನು ನಾ ಮಲೆನಾಡಿಗೆ ನನ್ನ ಒಲುಮೆಯ ಗೂಡಿಗೆ'-ಎಂದು 'ಪಕ್ಷಿಕಾಶಿ'ಯ ಕವಿತೆಯೊಂದರಲ್ಲಿ ಹಂಬಲಿಸುತ್ತಾರೆ. ಮಲೆನಾಡಿಗೆ ಹೋಗುವುದು ಯಾಕೆ, ಅಲ್ಲಿ ಏನಿದೆ ಎಂಬುದನ್ನು ಆ ಕವಿತೆ ತರ್ಕಬದ್ಧವಾಗಿ ಉಪನ್ಯಾಸಿಸುತ್ತದೆ. ಈ ನಿಸರ್ಗ ಪ್ರಿಯತೆ ಅಭ್ಯಾಸದಿಂದ ಕಲಿತದ್ದಲ್ಲ, ಅದೊಂದು ಭಗವತ್ ಕೃಪೆ. 'ಗಿರಿವನ ಪ್ರೀತಿ ತಾಂ ದೈವ ಕೃಪೆದಲ್'-ಎನ್ನುತ್ತಾರೆ ರಾಮಾಯಣ ದರ್ಶನದ ವಿಶ್ವಾಮಿತ್ರ.

ಕುವೆಂಪು ಅವರ ಪ್ರಕೃತಿ ಸೌಂದರ್ಯಾನುಭವ ಅವರ ಅನೇಕ ಕವನ ಸಂಗ್ರಹಗಳಲ್ಲಿ ಪದರು ಪದರಾಗಿ ವ್ಯಕ್ತವಾಗಿದ್ದರೂ, ಅವರ 'ಪಕ್ಷಿಕಾಶಿ' ಕವನ ಸಂಗ್ರಹವನ್ನು ಅವರ ಪ್ರಾತಿನಿಧಿಕ ಕವನ ಸಂಗ್ರಹವೆಂದು ಭಾವಿಸಿ ಕೆಲವು ಮಾತುಗಳನ್ನು ಇಲ್ಲಿ ಹೇಳಲಾಗಿದೆ:

ಪಕ್ಷಿಕಾಶಿಯಲ್ಲಿ ಮುಂಜಾನೆ-ಸಂಜೆಗಳನ್ನು ಕುರಿತ ಕವಿಗಳೇ ಹೆಚ್ಚು. ಅದರಲ್ಲೂ ಸೂರ್ಯೋದಯವನ್ನು ಕುರಿತವು ಹತ್ತರಷ್ಟಿವೆ. ಬೇಂದ್ರೆಯವರನ್ನು 'ಶ್ರಾವಣದ ಕವಿ' ಎಂದಂತೆ, ಕುವೆಂಪು ಅವರನ್ನು 'ಸೂರ್ಯೋದಯದ ಕವಿ' ಅನ್ನಬಹುದೇನೋ. ಅವರ ಎಲ್ಲ ಕವನ ಸಂಗ್ರಹಗಳ 'ಸೂರ್ಯೋದಯ'ವನ್ನು ಕುರಿತ ಕವನಗಳನ್ನು ಲೆಕ್ಕಹಾಕಿದರೂ ಈ ಮಾತಿಗೆ ಪುಷ್ಟಿ ದೊರೆಯುತ್ತದೆ. ಸೂರ್ಯೋದಯ ಸೂರ್ಯಾಸ್ತಮಾನದ ಸೊಗಸು, ಅಂದಂದಿನ ಋತುಮಾನಕ್ಕನುಸಾರವಾಗಿ ಎಷ್ಟೊಂದು ವೈವಿಧ್ಯಮಯವಾಗಿರುವುದೆಂಬ ಅಂಶವನ್ನು ಕುವೆಂಪು ಅವರಂತೆ ಮತ್ತಾರೂ ತೋರಿಸಿಕೊಟ್ಟಿಲ್ಲ.

‘ಪಕ್ಷಿಕಾಶಿ’ ಸಂಗ್ರಹದಲ್ಲಿ ‘ಬಾ ಫಾಲ್ಗುಣ ರವಿದರ್ಶನಕೆ’ ‘ದೇವರು ರುಜುಮಾಡಿದನು’ ‘ಗಗನ ಗುರು’ ‘ಚೋರೆ-ಬೋರೆ’ ‘ಲತಾನಟಿ’ ‘ಕವಿ ಶೈಲದಲ್ಲಿ ಸಂಧ್ಯೆ’ ಇಂಥ ಐದಾರು ಅತ್ಯುತ್ತಮ ಕವಿತೆಗಳಿವೆ.ಇನ್ನುಳಿದವು ಮುಖ್ಯವಾಗಿ ಅವರ ಸೌಂದರ್ಯಾನುಭವದ ವಾಚ್ಯಾಭಿವ್ಯಕ್ತಿಗಳೋ, ಉಪನ್ಯಾಸಗಳೋ, ತತ್ವದೃಷ್ಟಿಯ  ಸೂತ್ರಗಳೋ ಆಗಿವೆ.

‘ಪಕ್ಷಿಕಾಶಿ’ಯ ಕವಿತೆಗಳ ರಚನೆಯ ಮಾದರಿಗಳು (Patterns) ಸಾಮಾನ್ಯವಾಗಿ ಅವರ ಇನ್ನಿತರ ಸಂಗ್ರಹಗಳ ಪ್ರಕೃತಿ ಕವನದ ಮಾದರಿಗಳೂ ಆಗುತ್ತವೆಯೆಂದು ಕಾಣುತ್ತದೆ. ಮುಖ್ಯವಾಗಿ ಅವರ ಪ್ರಕೃತಿ ಕವನಗಳ ಮಾದರಿ ಇದು:

೧. ಕವಿ ೨. ಕವಿಕಾಣುವ ನಿಸರ್ಗದ ವಸ್ತು ೩. ಕವಿಗೂ ನಿಸರ್ಗಕ್ಕೂ ಏರ್ಪಡುವ ಸೌಂದರ್ಯಾನುಭವ. ೪. ಈ ಸೌಂದರ್ಯಾನುಭವದಿಂದ ನಿಷ್ಪನ್ನವಾಗುವ ಒಂದು ತತ್ವ ಅಥವ ಕವಿಯ ತಾತ್ವಿಕ ನಿಲವು.

ಈ ಕವಿತೆಗಳಲ್ಲಿ ಕಾಣುವ ಕವಿ, ಕವಿತೆಯ ಒಂದು ಅನಿವಾರ್ಯವಾದ ಭಾಗ. ‘ನಾನು’ ಅನ್ನುವುದೆ ಕವಿತೆಯ ಕೇಂದ್ರ. ಪಾಶ್ಚಾತ್ಯ ಭಾವಗೀತೆಯ ಸಿದ್ಧಾಂತದ ಪ್ರಕಾರ, ಕವಿಯೇ ಕಾವ್ಯದ ಕೇಂದ್ರ ಬಿಂದು. ಕುವೆಂಪು ಅವರ ನಿಲುವು, ಪಾಶ್ಚಾತ್ಯ ಭಾವಗೀತೆಯ ಸಿದ್ಧಾಂತಕ್ಕೆ ಸಂಪೂರ್ಣ ಅನುಸಾರವಾಗಿದೆ. ವ್ಯಕ್ತಿನಿಷ್ಠವಾದ, ವಯ್ಯಕ್ತಿಕಾನುಭವದ ಅಭಿವ್ಯಕ್ತಿಯಾಗಿವೆ ಕುವೆಂಪು ಅವರ ಒಂದೊಂದು ಕವಿತೆಯೂ.

**‘ನಾನು, ನಾಯಿ, ಮೆಟ್ಟುಕೊಡೆ**
**ನಾಲ್ವರೆ ತಿರುಗಾಟಕೆ’**
**‘ಕ್ರೌಂಚ ಪಕ್ಷಿಯ ಪಂಕ್ತಿ ಗಗನದಲಿ ಹಾರುತಿದೆ ಎಂದರಿತು**
**ಜವದಿ ಬಾಗಿಲ ತೆರೆದು ಧುಮುಕಿದೆನು ಹೊರಗೆ’**
**‘ಬೆಟ್ಟದುದಿಯಲಿ ಗುಡಿಯ ಗೋಪುರಂ ನಿಂತಂತೆ**
**ನಿಂತೆನಾಂ ನೀರ್ಮನೆಯ ದಿಬ್ಬದಲ್ಲಿ ದೃಷ್ಟಿಯಿಂ ಸೃಷ್ಟಿಯಿಂ ತಬ್ಬಿ’**
**‘ಶರತ್ಕಾಲದ ಸೂರ್ಯೋದಯದಲಿ**
**ಸ್ವರ್ಗವು ಹೊಮ್ಮಿರೆ ಮರ್ತ್ಯ ಹೃದಯದಲಿ**
**ಹೊರ ಹೊರಟೆನು ನಾ ಸಂಚರಿಸಿ’**
**‘ಹೋಗುವೆನು ನಾ ಮಲೆನಾಡಿಗೆ’**

ಇಲ್ಲೆಲ್ಲ ಕವಿಯ ‘ನಾನು’ ಕೇಂದ್ರವಾಗಿದೆ. ಕವಿತೆ ಮೂಲತಃ ಕವಿಯ ವ್ಯಕ್ತಿನಿಷ್ಠಾನುಭವದ ಅಭಿವ್ಯಕ್ತಿ. ಈ ವ್ಯಕ್ತಿ, ಈ ಕವಿತೆಗಳ ಪರಿಸರವನ್ನು ಗಮನಿಸಿದರೆ, ಏಕಾಂಗಿ, ಜನಸಂಗ ದೂರವಾದ ನಿಸರ್ಗದಲ್ಲಿ ಸಂಚಾರಿ. ‘ವ್ಯೋಮದ ರವಿ, ಭೂಮಿಯ ಕವಿ, ಪ್ರೇಕ್ಷಕರಿನ್ನೊಬ್ಬರ ಕಾಣೆ’ ಎಂಬಂತಹ ವಿವಿಕ್ತತೆ.

ಈ ‘ನಾನು’ ಕೇಂದ್ರವಾದ ಕವಿಗೆ, ನಿಸರ್ಗದಲ್ಲಿ ಯಾವ ರಮ್ಯತೆ ಕಂಡಿತೆಂಬುದು ಕವಿತೆಯ ಎರಡನೆಯ ಅಂಶ. ಹಾಗೆ ಕಂಡ ಸೊಗಸನ್ನು ವರ್ಣೋಜ್ವಲವಾಗಿ, ಖಚಿತವಾಗಿ, ಕೆತ್ತಿ ನಿಲ್ಲಿಸಿದಂತೆ ನಮ್ಮೆದುರು ಇಡುತ್ತಾರೆ ಕುವೆಂಪು. ನಿಸರ್ಗದ, ಬಣ್ಣ, ಚಲನೆ, ಕಂಪು, ವೈವಿಧ್ಯ ಎಲ್ಲವನ್ನೂ ಚಿತ್ರಸ್ಥವಾದಂತೆ, ನಿಲ್ಲಿಸುವ ವರ್ಣಶಿಲ್ಪಿ ಇವರ ಪ್ರತಿಭೆ.

**ಹಚ್ಚನೆ-ಪಚ್ಚನೆ ವೇದಿಕೆಯಲ್ಲಿ**
**ಸಾಸಿರಗಟ್ಟಲೆ ಮುತ್ತನು ಚೆಲ್ಲಿ**
**ರನ್ನದ ಕಿರು ಹಣತೆಗಳಲ್ಲಿ**
**ಶ್ಯಾಮಲ ತೈಲದಿ ಹೊನ್ನಿನ ಬತ್ತಿ**
**ಕಾಮನ ಬಿಲ್ಲಿನ ಬೆಂಕಿಯು ಹೊತ್ತಿ**
**ಸೊಡರುರಿಯುತ್ತಿವೆ ಅಲ್ಲಲ್ಲಿ**

ಈ ಅಪೂರ್ವ ಖಚಿತಾಕಾರ ಕುಸುರಿಗೆಲಸದ ವರ್ಣನೆ-ಇಂದ್ರಿಯ ಗೋಚರವಾದ ಅನುಭವಕ್ಕೆ ಕಲ್ಪನೆಯನ್ನು ತೊಡಿಸಿ ನಿಲ್ಲಿಸುತ್ತದೆ.

ಮೂರನೆಯದು, ಈ ನಿಸರ್ಗ ಸೌಂದರ್ಯಕ್ಕೆ ಮತ್ತು 'ನಾನು' ಎಂಬ ಈ ಕವಿ ಚೇತನಕ್ಕೆ ಉಂಟಾದ ಸಂಯೋಗಾನುಭವದ ಸ್ವರೂಪದ ವರ್ಣನೆ. ಬಹಿರಂಗದ ಸೌಂದರ್ಯ ಕವಿಯ ಅಂತರಂಗದಲ್ಲಿ ಮಾಡಿದ ಪರಿಣಾಮದ ಅಥವಾ ಸೌಂದರ್ಯಾನುಭವದ ವರ್ಣನೆ:

**'ಉರಿ ಕಿಡಿದೆನು ಹಿಮಮಣಿಯಂತೆ'**
**'ಹಸುರ್ಗಟ್ಟಿತು ಕವಿಯಾತ್ಮಂ**
**ಹಸುರ್ನೆತ್ತರ್ ಪೊಡಲಿನಲಿ'**
**'ಕಣ್ ತುಳುಕಿತೆದೆ ನಲಿದುದು**
**ಅಸು ಹಿಗ್ಗಿತುಲ್ಲಸದಿ; ಮಿಂಚು ಹರಿದಂತೆ ನೆತ್ತರು ಚಿಮ್ಮಿ**
**ದೇಹದಲಿ ತೇಜಸ್ವಿಯಾದೆ ನಾಂ ಸೂರ್ಯನಂತೆ'**
**'ಕಂಡೆ ಕೇಳ್ದೆ, ದಣಿವ ಮರೆತೆ**
**ಉಲ್ಲಾಸವ ತಾಳಿದೆ'**
**'ನಮ್ಮ ಹಳ್ಳಿ ಗದ್ದೆ ತೋಟ,ಬೈಲು ಬೆಟ್ಟ ಬನದ ನೋಟ**
**ತೇಲಿ ಬಹವು ಮನದಲಿ'**
**'ನೋಡುವೆನ್ನಾತ್ಮವೂ ದೃಶ್ಯದಲಿ ಲೀನತೆವೆತ್ತು**
**ಶೂನ್ಯ ಬೃಹದಾಕಾಶದಲಿ ಶೂನ್ಯದಂತಾಯ್ತು'**
**'ಹೃದಯ ಪ್ರಪಾತಕ್ಕೆ ಧುಮುಕುತಿದೆ**
**ರಸದ ಧುನಿ'**
**'ಧ್ಯಾನ ಪ್ರಲಯಿತ ಕವಿತಾನಾದನ್**
**ಬೈಗಿನ ಬಾನ್'**

ಕವಿ, ನಿಸರ್ಗ ಸಾನಿಧ್ಯದಲ್ಲಿ ತನಗಾದ ಅನುಭವವನ್ನು ತಾನೇ ವರ್ಣಿಸುವ ರೀತಿ ಇದು. ಒಂದು ರೀತಿಯಲ್ಲಿ ಇದು ರಸಾನುಭೂತಿಯ ವರ್ಣನೆ. ಕವಿಗೆ ಏನಾಯಿತೆಂಬುದನ್ನು ಕವಿತೆಯೇ ಹೇಳುವ ಬದಲು, ಕವಿತೆಯೊಳಗಿನ ಕವಿ

ಪ್ರತ್ಯೇಕವಾಗಿ ಹೇಳುವ ಅಗತ್ಯವಿದೆಯೆ ಎನ್ನುವುದು ಇಲ್ಲಿ ಅನೇಕರು ಎತ್ತುವ ಒಂದು ಆಕ್ಷೇಪಣೆ. ಆದರೆ ಇದು ಕುವೆಂಪು ಅವರ ಕವಿತೆಯ ರಚನಾತಂತ್ರ ಕೂಡಾ ಎಂದು ಸಮಾಧಾನ ಹೇಳಬಹುದು.

ನಾಲ್ಕನೆಯದು ಮತ್ತು ಕವಿತೆಯ ಮುಕ್ತಾಯದ ಭಾಗ. ಈ ಸೌಂದರ್ಯಾನುಭವದಿಂದ ನಿಷ್ಪನ್ನವಾಗುವ ಒಂದು ತತ್ತ್ವ ಅಥವಾ ತತ್ತ್ವ ದೃಷ್ಟಿಯ ನಿರೂಪಣೆ. ಇದು ಸೂತ್ರರೂಪವಾಗಿದೆ ಅಥವಾ ಕೆಲವೆಡೆ ವಿವರಣಾತ್ಮಕವಾಗಿದೆ;

**‘ತೆಗೆ ಜಡವೆಂಬುದೆ ಬರಿ ಸುಳ್ಳು’**
**‘ಚೈತನ್ಯವಲ್ಲದಿನ್ನಿಲ್ಲ ವಿಶ್ವದಲಿ’**
**‘ಶಿವ ಕಾಣದೆ ಕವಿ ಕುರುಡನೊ**
**ಶಿವ ಕಾವ್ಯದ ಕಣ್ಣೊ’**
**‘ಸಕಲಾರಾಧನ ಸಾಧನ ಬೋಧನದನುಭವ ರಸ ತಾನಹುದಿಲ್ಲಿ’**
**‘ಜೀವಿಸುವುದಕ್ಕಿಂತಲು ಬೇರೆಯ ಗುರಿ**
**ಜೀವಕೆ ಬೇಕಿಲ್ಲ’,**

ಇಂಥ ಸೂತ್ರಗಳಷ್ಟೇ ಅಲ್ಲ; ತಾವು ಕಂಡ ಚೆಲುವಿನ ಬಗೆಗೆ ಅದನ್ನು ಸವಿಯಬೇಕಾದ ಅವಶ್ಯಕತೆಯ ಬಗೆಗೆ,ಇದು ಆ ಪರಾಶಕ್ತಿಯ ಒಂದು ಅಭಿವ್ಯಕ್ತಿ ಎನ್ನುವ ಬಗೆಗೆ ಉಪನ್ಯಾಸವೂ ಆಗುತ್ತದೆ ಇವರ ಕವಿತೆ.

**‘ಸುಂದರ ಮಹೇಶ್ವರನ ರಸಮಯ ಶರೀರವಿದು**
**ಈ ವಿಶ್ವ ರೂಪದಲಿ ನಮಗೆ ತೋರುತಿದೆ’**
**‘ಬಿಸಿಲದು ಬರಿ ಬಿಸಿಲಲ್ಲವೊ, ಸೂರ್ಯನ ಕೃಪೆ ಕಾಣೊ’**
**‘ಭುವನ ಕವಿವರನ ಕವನವೀ ಸೃಷ್ಟಿ’**
**‘ಕಣ್ದೆರೆದು ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ**
**ನೋಡದಿಹ ಬಾಳೊಂದು ಬಾಳಲ್ಲ’**
**‘ಸವಿಯದಿರೆ ನೋಡದಿರೆ, ಬದುಕಿಯೂ ನಾವು ಸತ್ತಂತೆ’**
**‘ಅದರೊಳೊಂದಾಗುವುದೆ ಪರಮ ರಸಿಕತೆ; ಅದಕೆ**
**ಮಿಗಿಲಹ ರಸಾನಂದ ಮತ್ತೆ ಬೇರೊಂದಿಲ್ಲ’**

ಹೀಗೆ, ಈ ಉಪನ್ಯಾಸ ವಿಧಾನದಲ್ಲಿ ಕಣ್ಣೆದುರಿಗಿನ ನಿಸರ್ಗ ಸೌಂದರ್ಯದ ಕಡೆ ಬೆರಳಿಟ್ಟು ತೋರಿಸುವುದು, ಅದರ ಸೊಗಸನ್ನು ವರ್ಣಿಸುವುದು,ಈ ಸೊಗಸನ್ನು ಆರಾಧಿಸುವುದು, ಆಸ್ವಾದಿಸುವುದು ಇದೇ ಮಹಾತ್ಕಾರ್ಯ, ಬದುಕಿನ ಗುರಿ ಎಂದು ಘೋಷಿಸುವುದು. ಇದನ್ನು ಸವಿಯಲಾರದ ಅರಸಿಕರ ಬಗ್ಗೆ ಆಕ್ರೋಶ ತಾಳುವುದು-ಈ ಅಂಶಗಳು, ಕುವೆಂಪು ಅವರ ಕವಿತೆಗಳನ್ನು ಮಲೆನಾಡಿನ ಸೌಂದರ್ಯದ ಜಾಹೀರಾತುಗಳೆಂಬಂತೆ ಮಾಡಿಬಿಡುತ್ತವೆ! ಸೌಂದರ್ಯಾನುಭವ ಸಾಮರ್ಥ್ಯವೆನ್ನುವುದು ‘ದೈವ ಕೃಪೆದಲ್’ ಎಂದು ಒಂದೆಡೆ ಅವರೇ ಹೇಳಿದರೂ, ಈ ನಮ್ಮ ಸುತ್ತಣ ನಿಸರ್ಗದ ಸೊಗಸನ್ನು ಎಲ್ಲರೂ ಅನುಭವಿಸುವ ಮತ್ತು ಅದರಿಂದ ಬದುಕಿನ ಸಾರ್ಥಕತೆಯನ್ನು ಪಡೆಯುವ

ಸಾಮರ್ಥ್ಯ ಎಲ್ಲರಿಗೂ ಲಭಿಸುವುದು ಯಾವಾಗ ಎಂಬ ತೀವ್ರವಾದ ಅನುಕಂಪ ಆಶಯಗಳು, ಇಂಥ ನಿಲುವಿನ ಹಿನ್ನೆಲೆಗಿವೆ ಎಂಬುದನ್ನು ಮರೆಯಬಾರದು.

ಕುವೆಂಪು ಅವರದು ಸೌಂದರ್ಯ ಧರ್ಮ. ದೇವಾಲಯ, ದೇವರು, ಪೂಜೆ, ಧರ್ಮ ಇತ್ಯಾದಿಗಳ ಬಗ್ಗೆ ಇರುವ ಸಾಂಪ್ರದಾಯಿಕ ಕಲ್ಪನೆಗಳನ್ನು ನಿರಾಕರಿಸಿ, ಅವುಗಳ ಸ್ಥಾನದಲ್ಲಿ ನಿಸರ್ಗ ಸೌಂದರ್ಯವನ್ನು ಸ್ಥಾಪಿಸುವ ಕುವೆಂಪು ಅವರ ಧೋರಣೆ ಒಂದು ರೀತಿಯಲ್ಲಿ ಕ್ರಾಂತಿಕಾರಕವಾದದ್ದೆನ್ನಬೇಕು. ಅವರ ಪ್ರಕಾರ ಭುವನವೇ ದೇವಾಲಯ, ಸೌಂದರ್ಯವೇ ದೇವರು, ಸೌಂದರ್ಯಾನುಭವವೇ ಆರಾಧನೆ. ಜಪ ತಪ ಪೂಜೆ ಪ್ರಾರ್ಥನೆಗಳಿಂದ ಏನೇನು ಲಭಿಸುವುದೆಂದು ಹಳೆಯ ಧರ್ಮ ಹೇಳುತ್ತಿತ್ತೋ ಅದೆಲ್ಲವೂ, ಈ ನಿಸರ್ಗ ಸೌಂದರ್ಯವನ್ನು ಕಣ್ತೆರೆದು ಆಸ್ವಾದಿಸಿ ಅನುಭವಿಸುವುದರಿಂದ ಲಭಿಸುತ್ತವೆ-ಎನ್ನುತ್ತಾರೆ ಕುವೆಂಪು. ಅಷ್ಟೇ ಅಲ್ಲ, ಪೂಜೆ-ಜಪ-ತಪಗಳಿಂದ, ದೊರಕುವುದೆಂದು ಹೇಳಲಾದ ಸ್ವರ್ಗ, ಸೌಂದರ್ಯಾರಾಧಕನಿಗೆ ಇಲ್ಲಿಯೇ ನಿಸರ್ಗ ಸೌಂದರ್ಯದಲ್ಲಿಯೇ ಮೂರ್ತೀಭವಿಸಿದೆ; ಆದರೆ ಅದನ್ನು ಕಾಣುವ ಕಣ್ಣು ನಮಗೆ ಇಲ್ಲ, ಎನ್ನುವ ಕಳಕಳಿ ಅವರ ಕವಿತೆಗಳಲ್ಲಿ ಮತ್ತೆ ಮತ್ತೆ ಕೇಳಿ ಬರುತ್ತದೆ-

**‘ಯಾವ ಗುಡಿ ಮಿಗಿಲು ಆ ಭುವನ ದೇವಾಲಯಕೆ?**
**ಮೇಣಾವ ವಿಗ್ರಹಂ ಮೀರಿರುವುದೀ ಚೈತ್ರ**
**ಪಂಚಮಿಯ....ದಿವ್ಯ ಸೂರ್ಯದೇವನಿಗೆ?’**

**‘ನಿನ್ನೆಯ ಸಂಜೆಯ ಮಳೆಯಲಿ ಮಿಂದು**
**ಕಳ ಕಳಿಸುವ ಹಸುರ್ಬಯಲಲಿ ಇಂದು**
**ಹೊಂಬಿಸಿಲಲಿ ಮಿರು ಮಿರುಗಿರೆ ಜಲಬಿಂದು**
**ಸತ್ತಳೊ ಊರ್ವಶಿ ಸ್ವರ್ಗದಲಿ!’**

**‘ಸ್ವರ್ಗವರಳುತಿದೆ ಆ ಮರದ ಮೈಸಿರಿಯಲ್ಲಿ,**
**ಊರ್ವಶಿ ತಿಲೋತ್ತಮೆಯರೆಲ್ಲ ನರ್ತಿಪರಿಲ್ಲಿ**
**ಆ ಮರದ ಕೆಂದಳಿರಿನಿಂದ್ರನಾಸ್ಥಾನದಲಿ’**
**‘............ಮನೆಬಾಗಿಲಿಗೆ ನಾಕ ಒಲಿದು ಬರೆ**
**ನಾವ್ ಲೆಕ್ಕಿಸುವುದಿಲ್ಲ ಕಣ್ಣೆತ್ತಿ, ತರುವಾಯ**
**ಹುಡುಕುವೆವು ತೊಳತೊಳಲಿ ತೀರ್ಥಯಾತ್ರೆಗಳಲ್ಲಿ ಸುತ್ತಿ’**

ಈ ಕೆಲವು ನಿದರ್ಶನಗಳು ಸಾಕು ಅವರ ಸೌಂದರ್ಯ ಧರ್ಮದ ಸ್ವರೂಪವನ್ನು ಗುರುತಿಸಲು. ಈ ದೃಷ್ಟಿಯಿಂದ ಅವರ ‘ಪ್ರಕೃತಿ ಉಪಾಸನೆ’ ಎಂಬ ಕವಿತೆ (ಅದು ಕವಿತೆಗಾಗಿ ತೀರಾ ವಾಚ್ಯವಾಗಿದ್ದರೂ)ಯನ್ನು ನೋಡಬಹುದು.

ಪಕ್ಷಿಕಾಶಿಯ ಅನೇಕ ಕವಿತೆಗಳಲ್ಲಿ ಈ ಒಂದು ‘ಸೌಂದರ್ಯ ಧರ್ಮ’ ಮತ್ತೆ ಮತ್ತೆ ಪುನರಾವರ್ತಿತವಾಗಿದೆ. ‘ಚಿರಸೌಂದರ್ಯದ ಸಂಪದವಿದ್ದರೆ ಧರ್ಮಕೆ ಚ್ಯುತಿಯಿಲ್ಲ’ ಎಂಬ ಸಮಾಧಾನದಿಂದ ಹೊರಟರೆ, ನಿಸರ್ಗ

ಸೌಂದರ್ಯಾನುಭವದಿಂದ 'ಸಕಲಾರಾಧನ ಸಾಧನ ಬೋಧನದನುಭವರಸ'ವನ್ನು ಪಡೆಯಬಹುದು ಎಂಬ ಶ್ರದ್ಧೆಯಲ್ಲಿ ಈ ಚಿಂತನೆ ನಿಲುಗಡೆಯನ್ನು ಪಡೆಯುತ್ತದೆ. 'ಧರ್ಮ'ದಿಂದ ಏನೇನು ಆಧ್ಯಾತ್ಮಿಕ ಪ್ರಯೋಜನಗಳು ಲಭಿಸುತ್ತವೆಂದು ಪರಂಪರಾಗತವಾಗಿ ತಿಳಿಯಲಾಗಿತ್ತೋ, ಅವೆಲ್ಲವೂ ಸೌಂದರ್ಯದ ಆರಾಧಕನಿಗೂ ದೊರೆಯುತ್ತವೆ-ಎಂಬ ಮಾತು, ಪಾಶ್ಚಾತ್ಯ 'ರೊಮ್ಯಾಂಟಿಸಿಸಂ'ಗೆ ಕುವೆಂಪು ಅವರು ಭಾರತೀಯ ಹಿನ್ನೆಲೆಯಲ್ಲಿ ಕೊಟ್ಟ ಹೊಸ ವ್ಯಾಖ್ಯಾನದಂತೆ ತೋರುತ್ತದೆ.

ಪಕ್ಷಿಕಾಶಿಯ ಐದಾರು ಕವಿತೆಗಳನ್ನು ಬಿಟ್ಟರೆ ಉಳಿದ ಬಹುತೇಕ ಕವನಗಳು ಹರಳುಗೊಂಡ ಭಾವಗೀತಗಳಾಗಿಲ್ಲ. ಅಲ್ಲದೆ ಒಂದು ಸಲ ವಾಸ್ತವವಾಗಿ ಆದ ಅನುಭವಗಳನ್ನೆ, ಅಂಥದೆ ಸಂದರ್ಭವನ್ನು ವಸ್ತುವನ್ನಾಗಿ ಉಳ್ಳ ಬೇರೆ ಬೇರೆಯ ಕವಿತೆಗಳಲ್ಲಿಯೂ ಪುನರಾವರ್ತಿಸಲಾಗಿದೆ. ಹೀಗಾಗಿ ಆ 'ಬೇರೆ'ಯ ಕವಿತೆ, ಹಿಂದಿನ ಕವಿತೆಗಿಂತ 'ಬೇರೆ'ಯಾದ ಅನುಭವವನ್ನೂ ಹೇಳುವುದಿಲ್ಲ. ಮತ್ತೊಂದು ಅಂಶವೆಂದರೆ ಇವರ ಕವಿತೆಗಳಲ್ಲಿ ಅನುಭವಗಳನ್ನು ಹರಳುಗೊಳಿಸುವ ಕ್ರಿಯೆಗಿಂತ, ವಿವರಿಸಿ ಹೇಳುವ ವಾಚ್ಯದ ಕಡೆಗೆ ಗಮನ ಹೆಚ್ಚಾಗಿದೆ. ಒಮ್ಮೊಮ್ಮೆ ತೀರಾ ಸೊಗಸಾದ ಪಂಕ್ತಿಗಳಿದ್ದು, ಅವುಗಳಿಗಾಗಿ ಇಡೀ ಕವಿತೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ,-ಹತ್ತಿಯ ಸೀರೆಯಲ್ಲಿರುವ ಜರತಾರಿ ಅಂಚಿನಿಂದಲೋ, ಚಿತ್ರದಿಂದಲೋ ಅದನ್ನು ಒಪ್ಪಿಕೊಳ್ಳುವಂತೆ. ಕುವೆಂಪು ಅವರ ಶೈಲಿ ಮೂಲತಹ ಕಥನ ಕಾವ್ಯಕ್ಕೆ ಹೇಳಿ ಮಾಡಿಸಿದ್ದೆ ಹೊರತು ಭಾವಗೀತೆಗಳಲ್ಲ. ಅವರ ಭಾವಗೀತೆಗಳು,-ಹರಳುಗೊಂಡವುಗಳಾಗದೆ, ವಿವರಣಾತ್ಮಕವೂ, ಕಥಾನಾತ್ಮಕವೂ ಆಗಿರುವುದು ಇದರಿಂದಲೇ. ತಮ್ಮ ಕಥನಕಲೆಯನ್ನು ಪಳಗಿಸಿಕೊಳ್ಳುವ ಮಾಧ್ಯಮಗಳಾಗಿ ಅವರಿಗೆ ಭಾವಗೀತೆಗಳು ಒದಗಿ ಬಂದಿರುವುದರಿಂದ, ಕುವೆಂಪು ಅವರನ್ನು 'ಭಾವಗೀತೆಯ ಕವಿ' ಎನ್ನುವುದಕ್ಕಿಂತ ಕಥನಕವಿ (Narrative Poet) ಎಂದು ಕರೆಯುವುದು ಉಚಿತ. ನಮಗೆ ತೋರುವ ಮಟ್ಟಿಗೆ ಅವರ ಭಾವಗೀತೆಗಳೆಲ್ಲ ಅವರ ಮಹಾಕಾವ್ಯರಚನೆಗೆ ನಡೆದ ಪೂರ್ವಸಿದ್ಧತೆಗಳಂತೆ ತೋರುತ್ತದೆ. ಆದುದರಿಂದಲೆ ಕುವೆಂಪು ಅವರಲ್ಲಿ ಸಾರ್ಥಕವಾದ ಭಾವಗೀತೆಗಳು ವಿರಳ.

**ನವೋದಯ-೧೯೭೬**

## ೪೧. ಕ್ರೌಂಚ ಪಕ್ಷಿ

ಶ್ರೀ ರಾಮಕೃಷ್ಣಾಶ್ರಮದ ನನ್ನ ಕೊಟಡಿಯಲಿ
ಕುಳಿತಿದ್ದೆ. ನೀರವತೆ ತುಂಬಿತ್ತು. ಮುಳುಗಿತ್ತು
ಧ್ಯಾನದಲಿ ಮಠವೆಲ್ಲ. ಪುಷ್ಯಪ್ರಭಾತ ರವಿ
ದಂತುರ ದಿಗಂತದಲಿ ಮೈದೋರಲನುವಾಗಿ
ಹಬ್ಬುತಿದ್ದತ್ತರುಣಕಾಂತಿ ಲಲಿತಾದ್ರಿಯಾ
ಹಿಂದಣ ದಿಶಾಭಿತ್ತಿಯಲಿ. ಇದ್ದಕಿದ್ದಂತೆ
ಬೆಚ್ಚಿಬಿದ್ದಾಲಿಸಿದೆ ಕಿವಿಯಾಗಿ: ಪರಿಚಯದ

ಕೊಂಚೆಯುಲಿ! ಕ್ರೌಂಚಪಕ್ಷಿಯ ಪಂಕ್ತಿ ಗಗನದಲಿ
ಹಾರುತಿದೆ ಎಂದರಿತು, ಜವದಿ ಬಾಗಿಲು ತೆರೆದು,
ದುಮುಕಿದೆನು ಹೊರಗೆ-ಮನೆಸೆರೆಯಿಂದ ಬಯಲಿಂಗೆ-
ಶೈಶವ ಸಹಜ ಕುತೂಹಲಿದಿಂದೆ; ಮೇಣ್ ಕವಿಗೆ
ಸಹಜವಾಗಿಹ ಮೋಹದಿಂದೆ.

ತಿಳಿಯಾಗಸದ
ನೀಲಪಟದಲಿ ಹಾರುತಿದ್ದತ್ತು ಸುಂದರಂ
ಕ್ರೌಂಚಪಂಕ್ತಿಯ ರೇಖೆ, ಕರಿಮಣಿಗಳಂ ವಿರಳದಿಂ
ಪೋಣಿಸಿದ ಸೂತ್ರದಂತೆ, ಒಂದಿಡಿಯ ಫರ್ಲಾಂಗು!
ಪುಂಖಾನುಪುಂಖತ್ವಮಂ ನಟಿಸಿ ತೋರ್ಪಂತೆ
ಒಂದಾದ ಮೇಲೊಂದು, ಒಂದರಾ ಹಿಂದೊಂದು,
ಒಂದೆ ಇಚ್ಛಾರಜ್ಜು ಬಂಧಿಸಿಹುದೆಂಬಂತೆ,
ನೀಲದಲಿ ನಿಸ್ತಂಭತೋರಣಂ ತೇಲ್ದುದೆನೆ
ಚಲಿಸಿತು ವಿಹಂಗಸಂಘಂ ವಿಯದ್ರಂಗದಲಿ,
ಯುವಕ ಕವಿ ಶಿಶುವಾಗಿ ಬಾಯ್ದೆರೆದು ಕಣ್ಮಲರೆ
ಮನವುಕ್ಕಿ ಎದೆಯುಬ್ಬಿ ಮಿಳ್ಮಿಳನೆ ಪೆಳ್ಪಳಿಸಿ
ನಿಷ್ಪಂದನಾಗಿ ನಿಲ್ವನ್ನೆಗಂ! ನೋಡುತಿರೆ,
ಹಾರುತಿರೆ, ನಿಮಿಷ ನಿಮಿಷಕೆ ದೂರದೂರಾಗಿ,
ಪಕ್ಷಿಗಳ ವಿರಳತೆ ನಿಬಿಡವಾಗಿ, ಬಾಂದಳದಿ
ನೀಳವಾಗಿಹ ಹೆಣೆದ ಜಡೆಯೊಂದು ತೇಲ್ದುದೆನೆ
ಋಜುಕುಟಿಲ ವಿನ್ಯಾಸದಿಂದೆ ತೆರೆತೆರೆಯಾಗಿ
ತೋರಿದತ್ತಾ ಮನೋಹರ ಕ್ರೌಂಚ ಖಗಪಂಕ್ತಿ!
ಮೆಲುಗಾಳಿಯಲಿ ತೇಲಿಬಹ ಊರ್ಣ ತನು ತಂತು
ಎಂತಲೆವುದೆಂತೊಲೆವುದಂತಂತು ಚಲಿಸಿತ್ತು

ಕೊಂಚೆವಿಂಡಿನ ಗೆರೆ, ನಭೋ ನೀಲ ವಾರಿಧಿಯ
ವೀಚಿಮಯ ವಿಸ್ತಾರದಲಿ ಮೀಸುತಿರುವೊಂದು
ತಿಮಿರದ ಸಲಾಕೆಯಂದದ ಕರಿಯುರಗನಂತೆ!
ಚಲಿಸುತಿಹ ಡೊಂಕು ಕೊಂಕಿನ ಕೊಂಚೆ ಕರಿಗೀಟು
ಹಾರಿದರೆ, ಬಳುಕಿದರೆ, ತಿರುಗಿದರೆ, ಸುತ್ತಿದರೆ,
ಚಲನೆಯೊಂದೊಂದನೂ ಅಭಿನಯಿಸಿತೆನ್ನಾತ್ಮ,
ಕಲ್ಪನೆಯೊಳನುಭವಿಸಿ! ನೋಡುವೆನ್ನಾತ್ಮವೂ

ಕ್ರೌಂಚ ಖಗಪಂಕ್ತಿ ತಾನಾಗಿ ಹಾರಿತು ನಭದ
ನೀಲದಲಿ, ಮೈಯೆಲ್ಲ ನೀಲಿಯಪ್ಪನ್ನೆಗಂ.
ಬರಬರುತೆ ಕಿರಿದಾಗಿ, ದೂರ ಬಹುದೂರಾಗಿ,
ಕೂದಲೆಳೆಯಂತಾಗೆ, ಕೊನೆಗೆ ಕಲ್ಪನೆಯಿತ್ತ
ಗಾತ್ರಮಾತ್ರಂಬೆತ್ತು....ಏನಿಲ್ಲದಂತಾಗಿ
ನೋಡುವೆನ್ನಾತ್ಮವೂ ದೃಶ್ಯಲೀನತೆವೆತ್ತು
ಶೂನ್ಯ ಬೃಹದಾಕಾಶದಲಿ ಶೂನ್ಯದಂತಾಯ್ತು!.....

ಎಚ್ಚತ್ತು ನಿಡುಸುಯ್ದು ನಿಂತೆ. ಕಂಬನಿಯೊರಸಿ
ನೋಡಿದೆನು ಮೂಡಿದಿನನಂ. ನೀರಸತೆಯಾಂತು
ಮಂಕುಕವಿದಂತಿದ್ದ ದಿನವೆನೆಗೆ ರಂಜಿಸಿತು
ಸ್ವರ್ಗೀಯವಾಗಿ! ಏಂ ಗೈದುದೊ ಪವಾಡಮಂ
ಆ ಕ್ರೌಂಚಪಂಕ್ತಿ ನನ್ನೆದೆಯ ಸುರಲೋಕದಲಿ,
ಮೇಣಂತೆ ಹೊರಲೋಕದಲಿ! ವೆಚ್ಚವಿಲ್ಲದೆಯೆ,
ದಣಿವಿಲ್ಲದೆಯೆ, ಮೇಣು ಹೊತ್ತುಗೊಲೆಯಿಲ್ಲದೆಯೆ
ನೂರು ನಾಟಕ ಸಿನಿಮದಾಮೋದಗಳನೆಲ್ಲ
'ಮಾಣು ಪೋ!' ಎಂದೆಂಬ ದಿವ್ಯದರ್ಶನವಾಯ್ತು
ನನಗಿಂದು! ಕಿರಿಯ ದೃಶ್ಯದಿ ಹಿರಿಯ ಸಗ್ಗವನೆ
ಕಾಂಬಂತೆ ವರವನೆನಗಿತ್ತ ಗುರುವೆ, ನಮಸ್ತೇ!

ಇಡಿಯ ಮೈಸೂರು ನಗರದ ಮೇಲೆ ಹಾರಿತಾ
ಛದ್ಮವೇಷದ ಸ್ವರ್ಗವಾ ಕ್ರೌಂಚ ಖಗಪಂಕ್ತಿ.
ಆದರದು ಮೊಗವೆತ್ತಿ ನೋಡಿಲ್ಲ! ಅದಕಿಲ್ಲ
ಪುರಸತ್ತು! ಮನೆಬಾಗಿಲಿಗೆ ನಾಕವೊಲಿದು ಬರೆ
ನಾವ್ ಲೆಕ್ಕಿಸುವುದಿಲ್ಲ ಕಣ್ಣೆತ್ತಿ! ತರುವಾಯ
ಹುಡುಕುವೆವು ತೊಳತೊಳಲಿ ತೀರ್ಥಯಾತ್ರೆಗಳಲ್ಲಿ
ಸುತ್ತಿ. ತೇರೆಳೆದು ಬಳಲುವರು; ಜಾತ್ರೆಗಳಲ್ಲಿ
ನೂಕಲು ನುಗ್ಗಾಟದಲಿ ಬೆವರುವರು; ಬೀದಿಯಲಿ
ಮೆರವಣಿಗೆ ಬರೆ ನೋಡುವರು ಹೊರಹೊರಟು ನುಗ್ಗಿ;
ಕ್ರೌಂಚ ಸುಂದರ ಪಂಕ್ತಿ ಗಾನಗೈದಂಬರದಿ
ಮುಕ್ತಿ ಮಂತ್ರವ ಬರೆಯುತ್ತೈತರೆ ಕೊರಳನೆತ್ತಿ
ಕಾಣುವರೆ ಗತಿಯಿಲ್ಲ!

ಪ್ರಾರ್ಥಿಸುವೆನನುದಿನಂ
ನನಗೆ ಆ ವರವಿತ್ತ ನಿನ್ನಂ, ಪ್ರಕೃತಿಮಾತೆ,
ನನ್ನ ಕನ್ನಡ ಬಂಧುಗಳ ಮನಕದನು ನೀಡು!
ಪಲ್ಲವಿಸುವಂತೆ ಕಲೆಯೆಲ್ಲರಲಿ, ಕೃಪೆಮಾಡು!

೨೫-೧-೧೯೩೫

## ೪೨. ಮಾಗಿಯ ಹಗಲು

ನಸು ನೀಲಿಯ ಮುಸುಗಾಂತಿಹ
ಮಾಗಿಯ ನಡುಹಗಲು;
ಅಲ್ಲಲ್ಲಿಯೆ ಬಾಂದಳದಲಿ
ಹಾಲ್ದೆರೆ ಕೆನೆಮುಗಿಲು!
ಬೆಳುದಿಂಗಳೆ ಬಿಸಿಲಾಗಿದೆ
ಎಂಬಂದದಿ ಮಾಗಿ
ಚಳಿಗಾಳಿಯ ಬೀಸುತಲಿದೆ
ಕಂಪಿಸೆ ಕುಳಿರಾಗಿ!

ಭೂಮಿಯ ತುಟಿಗಾಗಸ ತುಟಿ
ಮುತ್ತಿಡುವೆಡೆಯಲ್ಲಿ
ದೂರದ ಗಿರಿಪಂಕ್ತಿಯು ಬರಿ
ಕನಸಾಗಿಹುದಲ್ಲಿ!
ನೀಲಿಯ ಮಳಲೊಟ್ಟಿದವೊಲು
ಮುಗಿಲಿಗೆ ಮೊಗ ಚಾಚಿ
ಶಿಖರಂಗಳು ಸ್ಪರ್ಧಿಸುತಿವೆ
ವೀಚಿಯ ಮೇಲ್ ವೀಚಿ!

ಹಸುರ್ಬಯಲಲಿ ಮೇಯುತಲಿರೆ
ಹಸುಕರುಗಳ ಮುಂದೆ
ಬೆಳ್ವಕ್ಕಿಗಳೋಡುತಲಿವೆ
ಹುಳುಬೇಂಟೆಗೆ ಹಿಂದೆ.
ತುರುಗಾಯುವ ಕಿರುಹೈದನು

ಕರಿಯಾಕಳ ಮೇಲೆ;
ನಡೆವಳು ಬಳಿ ನಗುನಗುತಲಿ
ಅವನೋರಗೆ ಬಾಲೆ!
ನೀರಾಗಿಹ ಕನ್ನಡಿಯೊಲು
ನಲಿಯುತ್ತಿಹ ಕೊಳದಿ
ದಡದಲ್ಲಿಯ ಗಿಡು ಬಳ್ಳಿಯು
ನಡುಗುತ್ತಿವೆ ಜಲದಿ.
ಆ ನೀಲಿಯ ಮುಗಿಲೋಳಿಯ
ಪಡಿನೆಳಲೀ ಬಾನು;
ಕಾಣೆನು ನಾನಾದರು ಇದೆ
ಪ್ರತಿಬಿಂಬದ 'ನಾನು!'

ಓ ಭೂಮಿಯೆ, ಓ ವ್ಯೋಮವೆ,
ಓ ಮಾಗಿಯ ಹಗಲೇ,
ಓ ಗಿರಿಗಳೆ, ಓ ತರುಗಳೆ,
ಓ ಬೆಳ್ಳಿಯ ಮುಗಿಲೇ,
ನಿಮಗಾಗಿಯೆ ನೀವ್ ವಂದ್ಯರು,
ನೀವ್ ಸೂಚಿಪುದಿರಲಿ!
ಏಕಾಂತತೆ ಸುಖಶಾಂತತೆ
ಶಿವಸತ್ಯವೊ ಸೌಂದರ್ಯವೊ
ಏನಾದರು ಇರಲಿ!

೨೦-೧-೧೯೩೪

## ೪೩. ಕವಿಶೈಲದಲ್ಲಿ ಸಂಧ್ಯೆ

ದೃಷ್ಟಿದಿಗಂತದ ಮೇರೆಯ ದಾಟಿ
ಗಗನದ ಮೇಘವಿತಾನವ ಮೀಟಿ
ದೂರಕೆ ದೂರಕೆ ಸುದೂರ ದೂರಕೆ
ಹಬ್ಬಿದೆ ಪರ್ವತ ದಿಗಂತ ಶ್ರೈಲಿ,
ಮೈಲಿ ಮೈಲಿ!

ಪಶ್ಚಿಮ ಗಿರಿಶಿರದಲಿ ಸಂಧ್ಯೆಯ ರವಿ;
ನಿರ್ಜನ ಕವಿಶೈಲದೊಳೊಬ್ಬನೆ ಕವಿ;
ಮಲೆನಾಡಿನ ಬುವಿ ಮೇಲರುಣಚ್ಛವಿ;
ವಸಂತ ಸಂಧ್ಯಾ ಸುವರ್ಣ ಶ್ರಾಂತಿ,
ಅನಂತ ಶಾಂತಿ!

ಸೊಂಡಿಲ ಮೇಗಡೆ ಸೊಂಡಿಲ ಚಾಚಿ
ವಿಶಾಲ ವ್ಯೋಮದ ಕರೆಯನೆ ಬಾಚಿ
ಸ್ಪರ್ಧಿಸುತಿರುವುವೊ ಎನೆ ದಿಗ್ದಂತಿ
ಹಬ್ಬಿದೆ ಸುತ್ತಲು ದಿಗಂತ ಪಂಕ್ತಿ,
ಗಂತಿ ಗಂತಿ!

ತೆರೆ ತೆರೆ ತೆರೆಯೆದ್ದರಣ್ಯ ಶ್ರೇಣಿ,
ಬಿದ್ದಿದೆ ನಿದ್ದೆಯೊಳೋ ಎನೆ ಪ್ರಾಣಿ,
ಅಸಂಖ್ಯವರ್ಣದಿ ಅಪಾರ ಪರ್ಣದಿ
ತಬ್ಬಿದೆ ಭೂಮಿಯನೆರಂಕೆ ಚಾಚಿ,
ವೀಚಿ ವೀಚಿ!

ಎಲ್ಲಿಯು ಎಲ್ಲವು ಮಹತ್ತೆ ಇಲ್ಲಿ
ಈ ಸಹ್ಯ ಮಹಾ ಬೃಹತ್ತಿನಲ್ಲಿ!
ಕ್ಷುದ್ರಸ್ಪಷ್ಟತೆಗೆಡೆಯಿಲ್ಲೆಲ್ಲಿ?
ಭವ್ಯಾಸ್ಫುಟವಿದು-ಶರೀರ ಸೀಮಾ
ವಿಹೀನಧಾಮ!

ಆಲಿಸು! ಕೇಳುತಲಿದೆ ಓಂಕಾರಃ
ನಿತ್ಯನಿರಂತರ ಅಲಿ ಝೇಂಕಾರ!
ಮನವೇ, ಧ್ಯಾನದಿ ಮುಳುಗು ವಿಧಾನದಿಃ
ನುಂಗಲಿ ನಿನ್ನಂ ತಪಃ ಸುಷುಪ್ತಿ,
ಅನಂತ ತೃಪ್ತಿ!*

೧೭-೫-೧೯೩೩

---

* ‘ಕವಿಶೈಲ’ ಶಿಖರವೇದಿಕೆಯ ಪರಿಚಯಕ್ಕೆ “ಮಲೆನಾಡಿನ ಚಿತ್ರಗಳು” ನೋಡಿ.

# ೪೪. ನವಿಲುಕಲ್ಲಿನಲ್ಲಿ ಸೂರ್ಯೋದಯ

ಕತ್ತಲೆಯ ಬಸಿರಿಂದೆ ಮೆಲ್ಲಮೆಲ್ಲನೆ ಪೊರಗೆ
ಪೊಣ್ಮುತಿದೆ ಶಿಖರಕಂದರಮಯಂ ಸಹ್ಯಾದ್ರಿ.
ಸ್ಪಷ್ಟತರವಾಗುತಿರೆ ಭೂವ್ಯೋಮಗಳ ಸಂಧಿ,
ದೃಶ್ಯ ಚಕ್ರದ ನೇಮಿಯಂದದಿ ದಿಗಂತ ಫಣಿ
ಸುತ್ತುವರಿದಿದೆ ದೃಷ್ಟಿವಲಯಮಂ. ನಾಣ್ಗೆಂಪು
ಮೊಗದೊಳೇರುವ ಉಷಾ ಭೋಗಿನಿಯ ಫಣೆಯಲ್ಲಿ
ಬೆಳ್ಳಿ, ಉಜ್ಜ್ವಲ ತಾರೆ, ಕುಂಕುಮ ಹರಿದ್ರದಿಂ
ರಂಜಿಸುವ ಪೊಂಬಣೆಗೆ ರಜತ ತಿಲಕದ ಬಿಂದು
ತಾನೆನೆ ವಿರಾಜಿಸಿದೆ.

ಹಸುರು ತಳಿರನು ತುಳಿದು,
ನಲುಗಿ, ನಲಿಯಿಸಿ, ನಲಿದು, ಯೋಜನ ಸುವಿಸ್ತರದ
ಕಾಂತಾರ ಪರಿಮಳಂಬೊತ್ತ ತಣ್ಣನೆ ಗಾಳಿ
ಮಂದ ಮಂದಂ ತೀಡಿ ಬೀಸುತಿದೆ, ಸುಖವಾಗಿ,
ತಂಪಾಗಿ. ಕತ್ತಲೆಯ ಕಂಬಳಿಯನುಳಿಯೆ ತಿರೆ,
ನೀಲಿಯೊಳಹೊದಿಕೆ ತಾಂ ತೋರ್ದುದೆನೆ, ಹಸರಿಸಿದೆ
ಹೊಗೆಯ ಮಂಜಿನ ತೆಳ್ಳನೆಯ ಪರದೆ, ಭೂದೇವಿ
ಉಟ್ಟ ಹಸುರುಡೆಯ ಹೋಲುವ ಕಾಡುಗಳ ಮೇಲೆ,
ಲೋಕಮೋಹಕವಾಗಿ ನೀಲಿಯ ಕನಸಿನಂತೆ!
ಪೆಂಪುವಡೆದಿರಲಿಂತು ಕಣ್ಗೆ.

ಕಿವಿಗಿಂಪಾಗಿ
ಕೇಳುತಿದೆ ಮಲೆವಕ್ಕಿಗಳ ಕೊರಳಿನಿಂಚರಂ,
ನಾದದ ಮಧುರ ನಂದನದ್ವಾರ ತೆರೆದಂತೆ.
ಮರದ ತುದಿಗೋಡಿನಲಿ ಕಾಮಳ್ಳಿ; ಪೊದೆಗಳಲಿ
ಪಿಕಳಾರಿ; ಹಸುರು ಚಾಮರಗಳನೆ ನಭಕೆತ್ತಿ
ಹಿಡಿದಂತೆ ಉಷೆಯ ನಸುಕಿನೊಳೆಸೆವ ಗರಿಗರಿಯ
ಬಿದಿರು ಮೆಳೆಗಳ ಗಳುಗಣೆಯ ಚೆಲವುನೆತ್ತಿಯಲಿ
ಕೆಮ್ಮೊನೆಯ ಹಸುರು ಹಳದಿಯ ಮೆಯ್ಯ ಗಿಳಿವಿಂಡು;
ಹೊಸ ತಳಿರ ಮರೆಯ ಕೋಗಿಲೆ; ಹೆಸರೆ ಇಲ್ಲದಿಹ

ನೂರಾರು ಸುಮಧುರ ವಿಹಂಗಮ ಅಮರಗಾನ!
ಸಂಗೀತ ಸೌಧಕ್ಕೆ ಹೊಂಗಳಶವಿಟ್ಟಂತೆ,
ಆಲಿಸದೊ, ಸುರಗೇಯ ಗಂಗೆಯನು ಹರಿಸುತಿದೆ
ಕಾಜಾಣ! ಗಾನದಾನಂದಕ್ಕೆ ಝುಮ್ಮೆಂದು
ಸ್ಪಂದಿಸುತ್ತಿದೆ ಶೈಲ ಕಾನನ ವಿರಾಟ್ ಪ್ರಾಣ!

ಅದೊ ನೋಡು, ಬಣ್ಣಗಳ ದಿಬ್ಬಣಂ! ಗಗನದಾ
ಶೈಲ ಶೈಲಿಯ ದಂತುರ ದಿಗಂತ ರಂಗದಲಿ
ದೇವತೆಗಳೆಲ್ಲರೂ ಅಪ್ಸರಿಯರೊಡಗೂಡಿ
ಇಂದ್ರನೈರಾವತದ ಹಿಂದುಗಡೆ ಮೆರವಣಿಗೆ
ಹೊರಟಿಹರೊ ಎನೆ ಶೋಭಿಸುತ್ತಿದೆ ಮನವನೊಲಿಸಿ!
ಶಿವನ ಮುಖಚಂದ್ರಿಕೆಯೆ ಸೌಂದರ್ಯ ರೂಪದಿಂ
ಪ್ರತ್ಯಕ್ಷವಾಗುತಿರೆ ಶಿವನೆ ಮೈದೋರ್ದಂತೆ
ಆಹ ನೋಡದೊ, ಮಲೆಗಳಾಚೆಯ ಸುದೂರದಲಿ
ಒಯ್ಯನಾವಿರ್ಭವಿಪನಮರ ತೇಜಸ್ವಿ ರವಿ!

ಹೃದಯಪ್ರಪಾತಕ್ಕೆ ಧುಮುಕುತಿದೆ ರಸದ ಧುನಿ
ಭಾವ ಜಲಪಾತದಿಂ! ಮೌನವೆ ಮಹಾ ಸ್ತೋತ್ರಂ
ಈ ಭೂಮ ಭವ್ಯ ಸೌಂದರ್ಯದಾರಾಧನೆಗೆ!
ನೋಡ, ಸುಮ್ಮನೆ ನೋಡ; ಮಾತಿಲ್ಲದೆಯೆ ನೋಡಃ
ಈ ದೃಶ್ಯ ಮಾಧುರ್ಯದಿದಿರಿನಲಿ ಕರ್ಕಶಂ
ಕವಿಯ ವಾಣಿಯು ಕೂಡ!

ನೋಡು, ಸುಮ್ಮನೆ ನೋಡು;
ದೃಶ್ಯದಲಿ ತಲ್ಲೀನನಪ್ಪನ್ನೆಗಂ ನೋಡು!
ಅದರೊಳೊಂದಾಗುವುದೆ ಪರಮ ರಸಿಕತೆ; ಅದಕೆ
ಮಿಗಿಲಹ ರಸಾನಂದ ಮತ್ತೆ ಬೇರೊಂದಿಲ್ಲ!*

೨೫-೫-೧೯೩೫

---

* ‘ಮಲೆನಾಡಿನ ಚಿತ್ರಗಳು’ ಭಾವಪ್ರಬಂಧಗಳಲ್ಲಿ ‘ನವಿಲುಕಲ್ಲು’ ಎಂಬ ಶಿಖರಸ್ಥಾನದ ಪರಿಚಯ ದೊರೆಯುತ್ತದೆ.

# ೪೫. ಇಬ್ಬನಿ

ಇರುಳು ಕತ್ತಲೆಯಲ್ಲಿ ಮಿಣುಮಿಣುಕಿ ಮೆರೆದಲೆದ
ಮಿಂಚುಹುಳು, ಹಗಲು ಬರೆ ಹಕ್ಕಿಯಿಂಚರದೊಡನೆ,
ವೈರಿ ಖಗಕುಲಕಳುಕಿ, ನೀರುಹನಿ ವೇಷದಲಿ
ಹಸುರು ಗರುಕೆಯ ಹುಲ್ಲು ಹುಲುಸಾಗಿ ನಳನಳಿಸಿ
ಬೆಳೆದ ಈ ಹಚ್ಚನೆಯ ಹಸಲೆಯಾಶ್ರಯವಾಂತು
ಹುದುಗಿದ್ದರೂ, ರವಿಯ ಕದಿರಿನೊಡಗೂಡಿ ಕವಿ
ಹತ್ತಿರಕೆ ಬರೆ, ಚಪಲ ಚಂಚಲತೆಗೆಂಬಂತೆ
ಗಹಗಹಿಸಿ ನಡೆಸೊಡರ ಬೀರಿ ಕಣ್ಮಿಟುಕುತಿದೆ,
ಸರಸದೊಲ್ಮೆಗೆ ಸನ್ನೆಗೈಯುತೆ ಕರೆಯುವಂತೆ!
ಹನಿಮುತ್ತಿನುರಿಮುತ್ತಿನಿಂಪಿಂಗೆ ಕಬ್ಬಿಗನೊ
ರಸಮೃತಿಯನೈದಿಹನಮೃತರಸ ಸರಸಿಯಲ್ಲಿ!

ಇಂಥ ಪ್ರಾತಃಕಾಲ; ಹಸುರು ಗರುಕೆಯ ಹುಲ್ಲು
ಹಸನಾಗಿ, ಹುಲುಸಾಗಿ, ಇಂತು ಹಸಿಹಸಿಯಾಗಿ
ಹಬ್ಬಿ ಮನಮೋಹಿಪಿಂತಹ ಹಚ್ಚನೆಯ ಬಯಲು;
ಇನಿದಾದ ಬೆಚ್ಚನೆ ಹಸುಳೆಬಿಸಿಲು; ಬಾನ್ನೀಲಿ;
ಅಲ್ಲಲ್ಲಿ ಮುಗಿಲು; ಎಲ್ಲಕೆ ಮಿಗಿಲು ಏಕಾಂತ,
ನಿರ್ಜನತೆ; ಇವರೊಡನೆ-ಗರುಕೆ ಮೂಗುತಿಯಂತೆ,
ರನ್ನದ ಸೊಡರಿನಂತೆ ಚೆಲ್ವುರಿವ ಹುಲ್ಲುಹನಿ:
ಪೋ! ಇದರ ಮುಂದೆ ಅರಸನ ಸಿರಿಯೆ? ಕಬ್ಬಿಗನ
ಕಾಲ್ಗಳಡಿ ಚಕ್ರವರ್ತಿಯ ವಿಫುಲ ಸಂಪತ್ತು!

೧೯-೯-೧೯೨೫

# ೪೬. ಹುಣ್ಣಿಮೆ ರಾತ್ರಿ

ಓ ನೋಡದೊ ರಂಜಿಸುತಿದೆ
ರಜನಿಯ ಕೈದೀಪ,
ನೀಲಧಿಯಲಿ ತೇಲುತ್ತಿಹ
ಜ್ಯೋತಿಯ ಸ್ವರ್ದೀಪ!
ತೆಳುತೆಳ್ಳನೆ ಬೆಳುಬೆಳ್ಳನೆ
ಮುಗಿಲುಣ್ಣೆಯ ರಾಶಿ
ಹೊಂಜೊನ್ನದಿ ಮಿಂದಂತಿದೆ
ಜೇನ್ಮಳೆಯನೆ ಸೂಸಿ!

ಸಹ್ಯಾದ್ರಿಯ ಗಿರಿಪಂಕ್ತಿಯ
ಕೊನೆಗಾಣದ ಲೀಲೆ;
ಬಹುಯೋಜನ ವಿಸ್ತೀರ್ಣದ
ವನರಾಜಿಯ ಮಾಲೆ.
ಬಾಂದಳದಿಂದಿಳಿಯುತ್ತಿರೆ
ಬೆಳ್ದಿಂಗಳ ಗಂಗೆ
ಹೊಳೆಯುತ್ತಿದೆ ಬರೆದಂದದಿ
ದೂರದಿ ನದಿ ತುಂಗೆ!

ಅಃ ಆಲಿಸು! ಆಕಾಶದಿ
ತೇನೆಯ ಸುರವಾಣಿ:
ಜುಮ್ಮೆಂದಿದೆ ಅದನಾಲಿಸಿ
ಸಹ್ಯಾದ್ರಿಯ ಶ್ರೇಣಿ!
ಸೌಂದರ್ಯದ ಮಧುಪಾನದಿ
ವಿಶ್ವವೆ ಉನ್ಮತ್ತ!
ಧ್ಯಾನದ ರಸದಾನಂದದಿ
ಸೃಷ್ಟಿ ಸಮಾಧಿಸ್ಥ!

ಏಂ ನೀರವಮೇಂ ನಿಶ್ಚಲ
ಮೀ ಹುಣ್ಣಿಮೆಯಿರುಳು;
ತಿಂಗಳ ಬೆಳಕಿಂಗಡಲಲಿ
ತೇಲಿದೆ ತಿರೆಯರಳು!

ಸುಧೆ ತುಂಬಿದ ವಿಧುಬಿಂಬದ
ಮಧು ಚಂದ್ರಿಕೆ ಮಾಯೆ
ನೆಲ ಬಾನ್ಗಳನೊಲಿದಪ್ಪಿರೆ
ದ್ವೈತವು ಬರಿ ಛಾಯೆ!

ಚೈತನ್ಯಕೆ ಜಡವೆಂಬುದು
ಕವಿಭಾವಕೆ ಭಾಷೆ;
ಈ ಭುವನದ ಭವ್ಯಾಕೃತಿ
ಆತ್ಮನ ಒಂದಾಶೆ!
ಓ ರಾತ್ರಿಯೆ, ಸಹ್ಯಾದ್ರಿಯೆ,
ಹುಣ್ಣಿಮೆ, ಶಶಿಕಾಂತಿ,
ನಿಮ್ಮೆಲ್ಲರ ಸಾನ್ನಿಧ್ಯವೆ
ಪರಮಾತ್ಮನ ಶಾಂತಿ!

೧೫-೯-೧೯೩೪

## ೪೭. ಶ್ರೀ ಪಾರ್ಥಿವ ಪುರುಷನಿಗೆ

ಓಂ! ಹಾಲು ಹಳ್ಳಹರಿಯಲಿ,
ಬೆಣ್ಣೆ ಬೆಟ್ಟವಾಗಲಿ!
ಜೇನುಮಳೆಯು ಸುರಿಯಲಿ,
ತೊಟ್ಟಿಲೊಲಿದು ತೂಗಲಿ!

ಓಂ! ಪೈರು ಪಚ್ಚೆ ಬೆಳೆಯಲಿ,
ತೆನೆಯ ಚಿನ್ನ ಹೊಳೆಯಲಿ!
ಹಕ್ಕಿ ಹೊಟ್ಟೆ ತಣಿಯಲಿ,
ಮಿಗವು ಸೊಗಸಿ ಕುಣಿಯಲಿ!

ಓಂ! ಮುಗಿದು ಸಮರ ನರಬಲಿ
ನರರು ನರರ ನಂಬಲಿ!
ಸ್ವಾಮಿಯಮೃತ ಕೃಪೆಯಲಿ
ಶಾಂತಿ ಜಗವ ತುಂಬಲಿ!

ಓಂ! ತರಣಿಯಾಗೆ ತಾರಣಂ
ದಡವ ಸೇರಲೀ ರಣಂ!
ಸಾರ್ಥಮಾಗೆ ಪಾರ್ಥಿವಂ
ಪೃಥ್ವಿಗಿಳಿಯಲಾ ದಿವಂ!

ಓಂ ಶಾಂತಿಃ ಶಾಂತಿಃ ಶಾಂತಿಃ!

## ೪೮. ಮೊದಲ ಚರಣಗಳ ಅಕಾರಾದಿ


ಅನಂತ ಕಾಲವು ನಿನ್ನನು ಹೊತ್ತಿದೆ / ೬೫

ಅನಂತದಿಂ / ೫೯

ಆಕಾಶದ ಹೆಬ್ಬಯಲಿನಲಿ / ೪೭

ಆನಂದಮಯ ಈ ಜಗಹೃದಯ / ೪

ಅಃ ಅದೋ! ಆಲಿಸಲ್ಲಿ / ೪೦

ಅಃ! ನಿಂತು ನೋಡಿಲ್ಲಿ / ೧೭

ಅಃ! ಮತ್ತದೊಮ್ಮೆ ಉಲಿ / ೩೧

ಇಂತಹ ಸುಂದರ ಪ್ರಾತಃಕಾಲದಿ / ೧೩

ಇಂದ್ರದಿಗಂತದಿ ದೂರದ್ದೂರಂ / ೨೭

ಇರುಳು ಕತ್ತಲೆಯಲ್ಲಿ ಮಿಣುಮಿಣುಕಿ ಮೆರೆದಲೆವ / ೮೧

ಇಲ್ಲಿ ಹುಗಲಿಲ್ಲ ನಿನಗೆ, ಓ ಬಿಯದ / ೧

ಓಡು ಹೊರಗೆ, ಓಡು ನೋಡು: / ೧೫

ಓ ನೋಡದೋ ರಂಜಿಸುತಿದೆ / ೮೨

ಓಂ! ಹಾಲು ಹಳ್ಳ ಹರಿಯಲಿ / ೮೪

ಕತ್ತಲೆಯ ಬಸಿರಿಂದೆ ಮೆಲ್ಲಮೆಲ್ಲನೆ ಪೊರಗೆ / ೭೯

ಕದ್ದಿಂಗಳು; ಕಗ್ಗತ್ತಲು; / ೬೭

ತಿರೆಯ ಹೋರಾಟದಲಿ / ೮

ದಿಗುತಟದಲಿ ತೆರೆಯುತಿತ್ತು / ೧೨

ದೂರಕೆ ದೂರಕೆ ಬಹುಬಹು ದೂರಕೆ / ೪೬

ದೃಷ್ಟಿದಿಗಂತದ ಮೇರೆಯ ದಾಟಿ / ೭೭

ದೇವರು ರುಜು ಮಾಡಿದನು; / ೧೫

ನವರಾತ್ರಿಯ ನವಧಾತ್ರಿಯ / ೩೨

ನಾನು ನಾಯಿ ಮೆಟ್ಟು ಕೊಡೆ / ೩೪

ನಿನಗೆ ನಾನು ನನಗೆ ನೀನು / ೫೭

ನಸು ನೀಲಿಯ ಮಸುಗಾಂತಿಹ / ೭೫

ನೋಡು! ನೋಡು! ಕುಳಿರ ಬೀಡು ಮಾಗಿ ಬರುತಿದೆ. / ೩೬

ಪಡುವಲ ಕಡಲಿನ ಮಿಂಚನು ಗುಡುಗನು ನುಂಗಿ ಬಸಿರಿನಲಿ, ಮುಡಿಗೆದರಿ, / ೫೫

ಫುಲ್ಲ ಕುಸುಮ ಫಣಾಜಟಿ / ೪

ಬೆಟ್ಟದುದಿಯಲಿ ಗುಡಿಯ ಗೋಪುರಂ ನಿಂತಂತೆ / ೨೦

ಬೆಂದ ನೆಲದಿಂದೊಡನೆ ಹೊಸ ಹಸುರು ಹೊಮ್ಮುವುದೆ?

ಬೊಬ್ಬುಳಿ ಗಿಡದಲಿ ಗುಬ್ಬಳಿಸುತ್ತಿದೆ / ೧೯

ಮನೆಯ ಮೆಯ್ಗೆ ಕಿಟಕಿ ಕಣ್ಣು / ೪೯

ಮಲೆಗಳೆಡೆಯ ಕಣಿವೆಯಲ್ಲಿ / ೨೯

ಮಾಗಿಯ ಪ್ರಾತಃಕಾಲದ ಬಿಸಿಲಲಿ / ೬೪

ಮಾಡಲು ಏನೂ ಕೆಲಸವೆ ಇಲ್ಲ / ೬೯

ಮುಸಲ ವರ್ಷ ಧಾರೆ / ೨೮

ಮುಳುಗುತಿವೆ ವರುಣ ದಿಕ್ಕಿನಲಿ ಮೃಗಶಿರ ರಾಶಿ / ೫೨

ಯಾರೂ ನೋಡದ ಯಾರಿಗು ಬೇಡದ / ೧೮

ಶರತ್ಕಾಲದ ಸೂರ್ಯೋದಯದಲಿ / ೬

ಶಿವಮಂದಿರಸಮ ವನಸುಂದರ ಸುಮ ಶೃಂಗಾರದ ಗಿರಿಶೃಂಗಕೆ ಬಾ / ೧೬

ಶ್ರೀ ರಾಮಕೃಷ್ಣಾಶ್ರಮದ ನನ್ನ ಕೊಟಡಿಯಲಿ / ౬೨

ಸಂಧ್ಯಾ ಶಿಲ್ಪಿಯ ಸುವರ್ಣಯಕ್ಷಿಣಿ / ೬೧

ಸುರ ಲೋಕದ ಸುರ ನದಿಯಲಿ ಮಿಂದು / ೩೮

ಸ್ವರ್ಗವನು ಬೇಟೆಯಾಡಲು ಹೊರಟೆ ಹೊತ್ತಾರೆ / ೬೨

ಹಿನ್ನೆಲೆಯನು ರಚಿಸಿರೆ ಸಂಜೆ / ೫೧

ಹಾಡಿದನು ಗಮಕಿ / ೬೬

ಹೇಳಿದರೆ ಹಾಳಾಗುವುದೊ ಅನುಭವದ ಸವಿಯು / ೩

ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ / ೪೧